ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 38 ಸೆಪ್ಟೆಂಬರ್ 26, 1982 ಬೆಲೆ 60 ಪೈಸೆ

"ಯುದ್ಧ ಬೇಡ ಶಾಂತಿ ಬೇಕು"

ಅಕ್ಟೋಬರ್ ೪ : ದೆಹಲಿಗೆ ಯುದ್ಧ ವಿರೋಧಿ ಶಾಂತಿ ಯಾತ್ರೆ

ಇಂದು ಜಗತ್ತನ್ನು ಅಣುಯುದ್ಧದ ವಿನಾಶಕ್ಕೆ ತಳ್ಳಲು ಸಾಮ್ರಾಜ್ಯಶಾಹಿ ಶಕ್ತಿಗಳು ಪ್ರಯತ್ನಿಸುತ್ತಿವೆ ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಹಿಮ್ಮೆಟ್ಟಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಇಂದು ಇರುವಷ್ಟು ಅಣು ಯುದ್ಧದ ಸಂಭವತೆ ಹಿಂದೆಂದೂ ಇರಲಿಲ್ಲ. ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಯತ್ನಗಳ ಕುರಿತು ಜನತೆಗೆ ಮನದಟ್ಟು ಮಾಡಲು ಅಕ್ಟೋಬರ್ 4 ರಂದು ದೆಹಲಿಗೆ ಯುದ್ಧ ವಿರೋಧಿ ಶಾಂತಿ ಯಾತ್ರೆಯನ್ನು ಆರು ರಾಜಕೀಯ ಪಕ್ಷಗಳು ಸಂಘಟಿಸಿವೆ. [ಆರು ರಾಜಕೀಯ ಪಕ್ಷಗಳು ಹೊರಡಿಸಿದ ಜಂಟಿ ಹೇಳಿಕೆ ಈಗಾಗಲೆ ಐಕ್ಯರಂಗ (ಆಗಸ್ಟ್ 8) ದಲ್ಲಿ ಪ್ರಕಟವಾಗಿದೆ]

ಸಿ. ಪಿ. ಐ. (ಎಂ) ಸೇರಿ ಆರು ಪಕ್ಷಗಳು ಅಕ್ಟೋಬರ್ 4 ರಂದು ದೆಹಲಿ ರ್‍ಯಾಲಿಗೆ ನೀಡಿರುವ ಕರೆಯನ್ನು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಸ್ವಾಗತಿಸಿದ್ದು, ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ರಾಜ್ಯದಿಂದ 25 ಪ್ರತಿನಿಧಿಗಳನ್ನು ಕಳಿಸಲಿದೆ.

ದೆಹಲಿ ಮತಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 4ರ ವರೆಗೆ ಎಲ್ಲ ಜಿಲ್ಲೆ, ತಾಲ್ಲೂಕು ಮಟ್ಟದಲ್ಲೆಲ್ಲ ಮೆರವಣಿಗೆ, ಸಭೆ, ವಿಚಾರಗೊಷ್ಠಿ ಕಾರ್ಯಕ್ರಮಗಳನ್ನು ನಡೆಸಿ, ಅಕ್ಟೋಬರ್ 4 ರಂದು ಬೆಂಗಳೂರು, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗ ಈ ಕೇಂದ್ರಗಳಲ್ಲಿ ಪ್ರಾದೇಶಿಕ ಮಟ್ಟದ ಬೃಹತ್ ರ್‍ಯಾಲಿಗಳನ್ನೇರ್ಪಡಿಸಬೇಕೆಂದು ಸೆಪ್ಟೆಂಬರ್ 8-9 ರಂದು ನಡೆದ ಸಿ. ಪಿ. ಐ. (ಎಂ) ರಾಜ್ಯ ಸಮಿತಿಯು ನಿರ್ಣಯಿಸಿದೆ.

ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಯತ್ನದಿಂದಾಗಿ ಇಂದು ಮಾನವ ಕುಲವೇ ನಾಶವಾಗುವ ಅಪಾಯವಿದೆ. ಇಂಥಹ ಪರಿಸ್ಥಿತಿಯಲ್ಲಿ ಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕೆ ಹೋರಾಡುತ್ತಿರುವ ನಮ್ಮ ಪಕ್ಷದ ಮೇಲೆ ದೊಡ್ಡ ಜವಾಬ್ದಾರಿ ಇದೆ. ದೇಶದ ಜನತೆಯನ್ನು ಎಚ್ಚರಿಸಿ, ತಿಳುವಳಿಕೆ ನೀಡಿ, ಸಂಘಟಿಸಿ, ಯುದ್ಧದ ಅಪಾಯದ ವಿರುದ್ಧ ಪ್ರತಿಭಟಿಸಿ, ಜಗತ್ತಿನಾದ್ಯಂತ ಬೆಳೆದು ಬರುತ್ತಿರುವ 'ಯುದ್ಧ ವಿರೋಧಿ ಮತ್ತು ಶಾಂತಿಗಾಗಿ' ಹೋರಾಟದೊಂದಿಗೆ ನಮ್ಮನ್ನು ಸೇರಿಸಿಕೊಂಡು, ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವನ್ನು ಬಲಗೊಳಿಸಬೇಕಾಗಿದೆ.

ಅಕ್ಟೋಬರ್ 4 ರಂದು ದೆಹಲಿಗೆ

(8ನೇ ಪುಟ ನೋಡಿ)

ಬೇರೂತ್‌ನಲ್ಲಿ ಭೀಕರ ನರಮೇಧ

ಕ್ರಿಶ್ಚಿಯನ್ ಪ್ರತಿಗಾಮಿಗಳಿಂದ ಸಹಸ್ರಾರು ಪ್ಯಾಲಿಸ್ಟೈನಿಯರ ಕಗ್ಗೊಲೆ

ಬೇರೂತ್ — 18 : ಪಶ್ಚಿಮ ಬೇರೂತ್‌ನ ಪ್ಯಾಲಿಸ್ಟೈನಿಯರ ಎರಡು ಶಿಬಿರಗಳ ಮೇಲೆ ಕ್ರಿಶ್ಚಿಯನ್ ಪ್ರತಿಗಾಮಿಗಳು ದಾಳಿ ಮಾಡಿ ಸಹಸ್ರಾರು ಜನರನ್ನು ಗುಂಡಿಕ್ಕಿ ಕೊಂದಿರುವ ಘೋರ ವಾರ್ತೆ ಬಂದಿದೆ. ಹೆಂಗಸರು, ಮಕ್ಕಳೆನ್ನದೆ ಕಂಡವರನ್ನೆಲ್ಲ ಸಾಯಿಸಿರುವ, ಹೆಣಗಳು ಚೆಲ್ಲಾಪಿಲ್ಲಿಯಾಗಿ ಬಿದ್ದು ಕೊಳೆತು ನಾರುತ್ತಿರುವುದನ್ನು ಪತ್ರಿಕಾ ವರದಿಗಾರರು ವರದಿ ಮಾಡಿದ್ದಾರೆ.

ಇತಿಹಾಸದಲ್ಲೇ ಅತ್ಯಂತ ಹೇಯವಾದ, ಅಮಾನುಷವಾದ ಈ ಘಟನೆಯಲ್ಲಿ ಸುಮಾರು 3000 ಜನರು ಸತ್ತಿದ್ದಾರೆಂದು ಪಿ. ಎಲ್. ಓ. ಅಧ್ಯಕ್ಷ ಅರಾಫತ್ ತಿಳಿಸಿದ್ದಾರೆ.

ಪ್ಯಾಲಿಸ್ಟೈನಿಯರ ಶಿಬಿರಗಳಲ್ಲಿ ನರಮೇಧ ನಡೆಯಲೆಂದೇ ಇಸ್ರೇಲಿ ಪಡೆಗಳು ಕ್ರೈಸ್ತ ಪೌರ ಸೇನೆಯನ್ನು ಅಲ್ಲಿ ಕರೆದೊಯ್ದು ಬಿಟ್ಟಿರುವುದಾಗಿ 'ದಿ ಟೈಮ್ಸ್' ವರದಿ ಮಾಡಿದೆ. ಲೆಬನಾನಿನ ಬಲಪಂಥೀಯ ಸಶಸ್ತ್ರ ಜನರನ್ನು ನಿರಾಶ್ರಿತ ಶಿಬಿರದ ಒಳಗೆ ಪ್ರವೇಶ ನೀಡಿ ತಮ್ಮ ಕಮ್ಯಾಂಡರುಗಳು ನರಮೇಧಕ್ಕೆ ಕಾರಣರಾದದ್ದನ್ನು ಇಸ್ರೇಲ್ ರಕ್ಷಣಾ ಸಚಿವ ಷರಾನ್ ಒಪ್ಪಿಕೊಂಡಿದ್ದಾನೆ.

ವ್ಯಾಪಕ ಪ್ರತಿಭಟನೆ :

ಈ ಭೀಕರ ನರಮೇಧವನ್ನು ಖಂಡಿಸಿ ಜಗತ್ತಿನ ಎಲ್ಲೆಡೆ ವ್ಯಾಕುಲ ವ್ಯಕ್ತಪಡಿಸಲಾಗಿದೆ. ಈ ಸಾಮೂಹಿಕ ಕಗ್ಗೊಲೆಯ ವಿರುದ್ಧ ಜಗತ್ತಿನಾದ್ಯಂತ

(8ನೇ ಪುಟ ನೋಡಿ)

ಚೀನಾ ಜನತೆಗೆ ಹಾರ್ದಿಕ ಶುಭಾಶಯಗಳು

ಈ ಅಕ್ಟೋಬರ್ 1ನೇ ತಾರೀಕಿಗೆ ಚೀನಾದಲ್ಲಿ ಕ್ರಾಂತಿಯಾಗಿ 33 ವರ್ಷಗಳು ಸಂಪೂರ್ಣವಾಗಿ 34ನೇ ವರ್ಷ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ನಾವು ಚೀನಾದ ಜನತೆಗೂ, ಅಲ್ಲಿಯ ಕಮ್ಯುನಿಸ್ಟ್ ಪಾರ್ಟಿಗೂ ಮತ್ತು ಸರ್ಕಾರಕ್ಕೂ ನಮ್ಮ ಶುಭಾಶಯಗಳನ್ನು ಕಳುಹಿಸಲಿಚ್ಛಿಸುತ್ತೇವೆ.

1-10-1949 ರಂದು ಚೀನಾದಲ್ಲಿ ಕ್ರಾಂತಿಯಾಯಿತು. ರಷ್ಯಾದಲ್ಲಾದ 1917ರ ಕ್ರಾಂತಿಯ ಬಳಿಕ ಇದು ಜಗತ್ತಿನಲ್ಲಿ ಅತ್ಯಂತ ಮಹತ್ವದ ಘಟನೆಯಾಗಿದೆ. ಆಗ ಅಲ್ಲಿದ್ದ ಸುಮಾರು 60 ಕೋಟಿ ಜನತೆ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಯಶಸ್ವಿಗೊಳಿಸಿ ಚೀನಾ ದೇಶವೂ ಜಗತ್ತಿನ ಸಮಾಜವಾದಿ ಶಿಬಿರದಲ್ಲಿ ಸೇರುವಂತಾಯಿತು. ಹೀಗಾಗಿ ಜಗತ್ತಿನ ಮೂರನೇ ಒಂದು ಭಾಗ ಬರ್ಲಿನ್‌ನಿಂದ ಪೇಕಿಂಗ್‌ವರೆಗೆ, ಅಂದರೆ ಪೂರ್ವ ಜರ್ಮನಿಯಿಂದ ಚೀನದವರೆಗೆ, ಬಂಡವಾಳಶಾಹಿ ವ್ಯವಸ್ಥೆಯು ನಾಶವಾಗಿ, ಸಮಾಜವಾದಿ ವ್ಯವಸ್ಥೆಯು ಅಸ್ತಿತ್ವದಲ್ಲಿ ಬಂತು. ಇದರಿಂದ ಜಗತ್ತಿನಲ್ಲೇ ಒಂದು ಗುಣಾತ್ಮಕ ಬದಲಾವಣೆಯಾಯಿತು

ಸಂಪಾದಕೀಯ

ಚೀನಾದಲ್ಲಾದ ಕ್ರಾಂತಿಯು ಮುಖ್ಯವಾಗಿ ಇತರ ವ್ಯವಸಾಯ ಪ್ರಧಾನವಾಗಿರುವ ಹಿಂದುಳಿದ ದೇಶಗಳ ಜನತೆಗೆ ಸ್ಫೂರ್ತಿದಾಯಕವಾಯಿತು. ಏಶಿಯಾ, ಆಫ್ರಿಕಾ ಖಂಡಗಳ ಜನತೆಯು ಇದರಿಂದ ಪಾಠ ಕಲಿತು ಈ ದೇಶಗಳಲ್ಲಿ ಕಾರ್ಮಿಕ ವರ್ಗವು ಬೆಳೆಯದಿದ್ದರೂ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತರನ್ನು ಸಂಘಟನೆಗೊಳಿಸಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಯಶಸ್ವಿಗೊಳಿಸಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿತು. ಹಿಂದುಳಿದ ದೇಶಗಳಿಗೆ ಇದೊಂದು ಮಾದರಿಯಾಗಿ ಪರಿಣಮಿಸಿತು.

ಕಳೆದ 33 ವರ್ಷಗಳಲ್ಲಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಚೀನಾ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ನಮ್ಮ ಪಾರ್ಟಿಯ ವಿಜಯವಾಡ ಅಧಿವೇಶನದ ರಾಜಕೀಯ ನಿರ್ಣಯದಲ್ಲಿ ಹೇಳಿರುವಂತೆ ಚೀನವು ಎಲ್ಲ ಗೊಂದಲಗಳನ್ನೂ ಎದುರಿಸಿಕೊಂಡು ಮುಂದುವರಿಯುತ್ತಿದೆಂಬುದಾಗಿ ಎಲ್ಲರೂ ಒಪ್ಪುತ್ತಾರೆ. ಅಲ್ಲಿ ಸಮಾಜವಾದಿ ಆಧುನೀಕರಣ ಹೋರಾಟವು ಯಶಸ್ವಿಯಾಗಿ ನಡೆದಿದೆ. 1980ರಲ್ಲಿ ಚೀನಾದಲ್ಲಿ ಉಕ್ಕಿನ ಉತ್ಪಾದನೆಯು 37 ಮಿಲಿಯ ಟನ್, ಕಲ್ಲಿದ್ದಲು ಉತ್ಪಾದನೆಯು 620 ಮಿಲಿಯ ಟನ್, ಕಚ್ಚಾ ಎಣ್ಣೆಯ ಉತ್ಪಾದನೆ 105 ಮಿಲಿಯ ಟನ್ ಮತ್ತು 300,000 ಮಿಲಿಯ kwh ಗಿಂತಲೂ ಹೆಚ್ಚಿನ ವಿದ್ಯುತ್ ಉತ್ಪಾದನೆಯಾಗಿದೆಯೆಂದು ಹೇಳಲಾಗಿದೆ. ಇದು ನಿಜವಾಗಿಯೂ ಹೆಮ್ಮೆಪಡಬೇಕಾದ ವಿಷಯ. 1949ರಲ್ಲಿ ಚೀನವು ಭಾರತಕ್ಕಿಂತಲೂ ಹಿಂದುಳಿದ ದೇಶವಾಗಿತ್ತೆಂಬುದನ್ನು ಗಮನಿಸುವುದಗತ್ಯ.

ಚೀನದ ಕ್ರಾಂತಿಯ ನಂತರ ಸುಮಾರು ಎರಡು ದಶಕಗಳ ತನಕ ಅಮೇರಿಕ ಅದನ್ನು ಯುನೈಟೆಡ್ ನೇಷನ್ಸ್‌ನಿಂದ ಹೊರಗಿಟ್ಟು ಮಾನ್ಯತೆ ಕೊಡದಿದ್ದರೂ ಚೀನವು ಪ್ರಗತಿ ಸಾಧಿಸಿತು. ಆದರೆ ನಂತರ ಅದರ ಧೋರಣೆ ಬದಲಾಗಿದೆ. ಮುಂದೆ ಚೀನದಲ್ಲಿ ಸಮಾಜವಾದಿ ವ್ಯವಸ್ಥೆಯು ಬಲಗೊಂಡಾಗ ಅದು ಇತರ ಸಮಾಜವಾದಿ ದೇಶಗಳೊಂದಿಗೆ ಸಹಕರಿಸಿ ಅಮೆರಿಕನ್ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಭಾಗವಹಿಸುವುದೆಂದು ನಮ್ಮ ಪಾರ್ಟಿ ನಂಬಿದೆ.

ಚೀನಾವೂ ಭಾರತವೂ ಹಿಂದಿನಿಂದಲೂ ಸ್ನೇಹ ರಾಷ್ಟ್ರಗಳಾಗಿದ್ದುವು ಆದರೆ 1959ರಲ್ಲಿ ಗಡಿ ವಿವಾದ ಎದ್ದಾಗ ಉಭಯ ದೇಶಗಳ ನಡುವೆ ವೈಷಮ್ಯ ಬೆಳೆದರೂ ಈಗ ಎರಡೂ ದೇಶಗಳು ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದು ಸ್ವಾಗತಾರ್ಹವಾಗಿದೆ. ಈ ಎರಡು ಬೃಹತ್ ರಾಷ್ಟ್ರಗಳ ನಡುವಿನ ಸಮಸ್ಯೆಗಳು ಬೇಗನೆ ಬಗೆಹರಿದು ಸ್ನೇಹ ಸಂಬಂಧಗಳು ಬೇಗನೆ ಸ್ಥಾಪನೆಯಾಗಲೆಂದು ನಾವು ಆಶಿಸುತ್ತೇವೆ. ಭಾರತದ ಸುಮಾರು 60 ಕೋಟಿ ಜನತೆಯೂ ಸುಮಾರು 90 ಕೋಟಿ ಚೀನದ ಜನತೆಯೂ ಒಂದಾದರೆ ಜಗತ್ತಿನಲ್ಲಿ ಎಂಥಹ ಬದಲಾವಣೆ ತರಲು ಸಾಧ್ಯವೆಂಬುದನ್ನು ಊಹಿಸಬಹುದು. ಸಾಮ್ರಾಜ್ಯಶಾಹಿಯನ್ನೆದುರಿಸಲು ಇದು ಅಗತ್ಯ. ಜಗತ್ತಿನ ಶಾಂತಿಗೂ, ನಮ್ಮ ಅಭಿವೃದ್ಧಿಗೂ ಇದು ಅಗತ್ಯ.

ಚೀನದ ಕ್ರಾಂತಿಗೆ ಜಯವಾಗಲಿ !

ಚೀನಾ–ಭಾರತ ಸ್ನೇಹ ಚಿರಾಯುವಾಗಲಿ !

ಎಸ್. ಎಫ್. ಐ. ಚಟುವಟಿಕೆಗಳು

ಮೈಸೂರು :

ಎಸ್.ಎಫ್.ಐ. ನೇತೃತ್ವದಲ್ಲಿ ೨ ಸಾವಿರ ವಿದ್ಯಾರ್ಥಿಗಳ ಬೃಹತ್ ರ್‍ಯಾಲಿ

15-9-1982 ರಂದು ಮೈಸೂರು ನಗರದ ಎಲ್ಲಾ ಜೂನಿಯರ್ ಕಾಲೇಜ್ ವಿದ್ಯಾರ್ಥಿಗಳು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ನೇತೃತ್ವದಲ್ಲಿ ತರಗತಿಗಳನ್ನು ಬಹಿಷ್ಕರಿಸಿ "ಸಂಬಂಧಗಳು" (ದ್ವಿತೀಯ ಪಿ.ಯು.ಸಿ. ಕನ್ನಡ ಉಪಪಠ್ಯ) ಪುಸ್ತಕದ ಬದಲಿ ಪುಸ್ತಕವನ್ನು ಉಚಿತವಾಗಿ ಸರಕಾರವೇ ಒದಗಿಸಬೇಕು ಇಲ್ಲವೇ "ಸಂಬಂಧಗಳು"ಪುಸ್ತಕವನ್ನೇ ಮುಂದು ವರಿಸಬೇಕು ಎನ್ನುವ ಬೇಡಿಕೆಯನ್ನು ಮುಂದಿರಿಸಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಎರಡು ಸಾವಿರಕ್ಕೂ ಹೆಚ್ಚು ಪಿ.ಯು.ಸಿ. ವಿದ್ಯಾರ್ಥಿಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಜಾತಿವಾದಿಗಳ ಕ್ಷುಲ್ಲಕ ಪ್ರತಿಭಟನೆಗೆ ಮಣಿದು 'ಸಂಬಂಧಗಳು' ಪುಸ್ತಕವನ್ನು ರದ್ದುಗೊಳಿಸಿದ ಸರಕಾರದ ಕ್ರಮವನ್ನು ರ್‍ಯಾಲಿಯಲ್ಲಿ ತೀವ್ರವಾಗಿ ಖಂಡಿಸಲಾಯಿತು.

ಸೆಪ್ಟೆಂಬರ್ 15 ರಂದು ದೇಶದಾದ್ಯಂತ ಎಸ್.ಎಫ್.ಐ., ಡಿ.ವೈ.ಎಫ್.ಐ. ನೇತೃತ್ವದಲ್ಲಿ ನಡೆದ "ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ" ಬೇಡಿಕೆ ದಿನಾಚರಣೆಯ ಕೇಳಿಕೆಗಳನ್ನು ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಮುಂದಿಡಲಾಯಿತು. ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸರಕಾರಿ ಹಾಸ್ಟೆಲುಗಳನ್ನು ಆರಂಭಿಸಲು, ಕ್ಯಾಪಿಟೇಶನ್, ಡೊನೇಶನ್ ಫೀ ರದ್ದುಗೊಳಿಸಲು, ಪಿ.ಯು.ಸಿ.ವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು, ಎಲ್ಲಾ ಕಾಲೇಜುಗಳಲ್ಲಿ ಚುನಾವಣೆ ನಡೆಸಲು, ವಿ. ವಿ. ಸೆನೆಟ್ ಸಿಂಡಿಕೇಟ್‌ಗಳಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯ ನೀಡಲು, ಏರುತ್ತಿರುವ ಬೆಲೆಗಳನ್ನು ತಡೆಗಟ್ಟಲು ಪಿ.ಯು.ಸಿ. ಮಂಡಳಿಯ ಭ್ರಷ್ಟಾಚಾರವನ್ನು ಕೂಡಲೇ ತನಿಖೆ ನಡೆಸಲು ಒತ್ತಾಯಿಸಲಾಯಿತು.

ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಅಲ್ಲೇ ಸಭೆ ನಡೆಸಲಾಯಿತು. ಕರ್ನಾಟಕ ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಮತ್ತು ಮೈಸೂರು ನಗರದ ಎಸ್. ಎಫ್. ಐ. ಮುಖಂಡರುಗಳಾದ ಸಲೀಂ ಗೋಪಿನಾಥ್, ಶೇಕಣ್ಣ, ಸುರೇಶ್, ಆರ್. ಜಿ. ರಮಣಾರೆಡ್ಡಿ, ಹನುಮಂತರಾಯ, ರಾಮಕೃಷ್ಣ, ನಂಜುಂಡೇಗೌಡ, ಜಯಸಿಂಹ ಮೊದಲಾದವರು ಬೃಹತ್ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಎಸ್.ಎಫ್.ಐ. ಅಧ್ಯಯನ ತರಗತಿ :

ಮೈಸೂರು ನಗರ ಎಸ್.ಎಫ್.ಐ. ಸಮಿತಿ ಆಶ್ರಯದಲ್ಲಿ ಇತ್ತೀಚೆಗೆ ಇಲ್ಲಿನ ರಾಮ ಮಂದಿರದಲ್ಲಿ "ಸ್ವಾತಂತ್ರ್ಯ" "ಪ್ರಜಾಪ್ರಭುತ್ವ" "ಸಮಾಜವಾದ" ಮತ್ತು "ಶಿಕ್ಷಣ ಪದ್ಧತಿ"ಬಗ್ಗೆ ಒಂದು ದಿನದ ಅಧ್ಯಯನ ತರಗತಿ ನಡೆಸಲಾಯಿತು. ಸ್ಥಳೀಯ ಕಾಲೇಜು ಅಧ್ಯಾಪಕರುಗಳಾದ ಕೆ. ಪಿ. ವಾಸುದೇವನ್, ಲಿಂಗದೇವರು ಹಳೆಮನೆ ಮತ್ತು ಪ್ರೊಫೆಸರ್ ಶ್ರೀನಿವಾಸನ್‌ರವರುಗಳು ಪಾಠ ಮಾಡಿದರು.

ಬಿಹಾರ ಪತ್ರಿಕಾ ಮಸೂದೆಗೆ ಖಂಡನೆ :

ಬಿಹಾರ ಪತ್ರಿಕಾ ಮಸೂದೆಯನ್ನು ಖಂಡಿಸಿ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಸಾರ್ವಜನಿಕ ರ್‍ಯಾಲಿ ಮತ್ತು ಸಭೆಯಲ್ಲಿ ಎಸ್.ಎಫ್.ಐ. ವಿದ್ಯಾರ್ಥಿಗಳು ಭಾಗವಹಿಸಿದ್ದರು. 4-9-82 ರಂದು ಶಾರದಾ ವಿಲಾಸ್ ಕಾಲೇಜ್ ವಿದ್ಯಾರ್ಥಿಗಳು ಎಸ್. ಎಫ್. ಐ. ಮುಖಂಡ ರಮಣಾರೆಡ್ಡಿಯವರ ನೇತೃತ್ವದಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಬಿಹಾರ ಪತ್ರಿಕಾ ಮಸೂದೆಯನ್ನು ಖಂಡಿಸಿ ಸಭೆ ನಡೆಸಿದರು.

ಹೊಸಪೇಟೆ :

12-9-82ರ ಸಂಜೆ 6 ಘಂಟೆಗೆ ಹೊಸಪೇಟೆಯಲ್ಲಿ ಎಸ್. ಎಫ್. ಐ. ನ ನೇತೃತ್ವದಲ್ಲಿ, ವಿಶ್ವದಾದ್ಯಂತ ಹೆಚ್ಚುತ್ತಿರುವ ನ್ಯೂಟ್ರಾನ್ ಬಾಂಬ್‌ನ ಅಪಾಯ ಕುರಿತು, ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧಕೋರ ನೀತಿಯನ್ನು ವಿರೋಧಿಸಿ, ಪ್ರಪಂಚದಾದ್ಯಂತ ನಡೆಯುತ್ತಿರುವ 'ಜಾಗತಿಕ ಶಾಂತಿ ಚಳುವಳಿ'ಗೆ ಬೆಂಬಲವಾಗಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಮುಖ್ಯ ಭಾಷಣಕಾರರಾಗಿ ಹೈಸ್ಕೂಲು ಅಧ್ಯಾಪಕ ಶ್ರೀ ಕೆ. ನಾರಾಯಣ ಭಟ್, ಎಸ್.ಎಫ್.ಐ. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಅವರು ಮಾತನಾಡಿದರು.

ಆರಂಭದಲ್ಲಿ ಕಾಂ। ಶೈಲೇಂದ್ರ ಸ್ವಾಗತಿಸಿದರು. ಹುಲುಗಪ್ಪ ಮತ್ತು ಸಂಗಡಿಗರಿಂದ ಸ್ವಾಗತ ಗೀತೆಯಾಯಿತು. ಬಸವರಾಜ್ ವಂದಿಸಿದರು.

ಇಲ್ಲಿನ ಹೈಸ್ಕೂಲು ಮಟ್ಟದ ಬಿ.ಸಿ.ಎಂ. ಹಾಸ್ಟೆಲ್‌ನಲ್ಲಿಯ ವಾರ್ಡನ್‌ನ ಅವ್ಯವಹಾರಗಳನ್ನು ಕುರಿತು, ಹಾಸ್ಟಲ್‌ನಲ್ಲಿಯ ಅವ್ಯವಸ್ಥೆಯ ಕುರಿತು ಸ್ಥಳೀಯ 'ಹೋರಾಟ' ಪತ್ರಿಕೆಯಲ್ಲಿ ಅಲ್ಲಿನ ವಿದ್ಯಾರ್ಥಿಗಳು ಬರೆದಿದ್ದರು. ಕುಪಿತಗೊಂಡ ವಾರ್ಡನ್ ಎಸ್. ಎಫ್. ಐ. ಸದಸ್ಯರಾದ ರುದ್ರಪ್ಪನವರನ್ನು ಹಾಸ್ಟೆಲ್‌ನಿಂದ ಹೊರ ಹಾಕಿದ್ದರು.

ವಿಷಯ ತಿಳಿದ ಎಸ್. ಎಫ್. ಐ. ಕಾರ್ಯಕರ್ತರು ವಾರ್ಡನ್‌ರನ್ನು ಭೇಟಿ ಮಾಡಿ ರುದ್ರಪ್ಪನವರನ್ನು ವಾಪಸ್ ತೆಗೆದುಕೊಳ್ಳಲು ಒತ್ತಾಯಿಸಿದ ನಂತರ ಅವರನ್ನು ಪುನಃ ಹಾಸ್ಟೆಲ್‌ಗೆ ಸೇರಿಸಿಕೊಳ್ಳಲಾಗಿದೆ.

ಹರಪನಹಳ್ಳಿ :

16-9-82 ರಂದು ಇಲ್ಲಿನ ಬಿ. ಸಿ. ಎಂ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕ್ಯಾರಿ ಓವರ್ ಸೌಲಭ್ಯ ಜಾರಿಗಾಗಿ ಒತ್ತಾಯಿಸಿ, ಸ್ಥಳೀಯ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಬೆಂಬಲಿಸಿ ಎಸ್. ಎಫ್. ಐ ಕಾರ್ಯಕರ್ತರು ಮೆರವಣಿಗೆ ನಡೆಸಿದರು.

ಮೆರವಣಿಗೆಯ ನಂತರ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ನಂತರ ಬಿ.ಸಿ.ಎಂ. ಹಾಸ್ಟೆಲ್‌ನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಕಾಂ। ಉಳ್ಳೇಶ್, ರಾಜಾಸಾಹೇಬ್ ಇವರುಗಳು ಮಾತನಾಡಿದರು.

●

ವಡೇರ ಹೋಬಳಿ :

ಡಿ.ವೈ.ಎಫ್.ಐ. ಶಾಲೆಯ ವಾರ್ಷಿಕ ಸಭೆ

ತಾ॥ 12-9-1982 ರಂದು ವಡೇರ ಹೋಬಳಿ(ಕುಂದಾಪುರ)ಯಲ್ಲಿ ಘಟಕದ ಡಿ.ವೈ.ಎಫ್.ಐ. ವಾರ್ಷಿಕ ಸಭೆ ನಡೆಯಿತು. ಸಭೆಯಲ್ಲಿ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರು ಮಂಡಿಸಿದರು. ವರದಿಯ ಮೇಲೆ ದೀರ್ಘ ಚರ್ಚೆ ನಡೆದು ಚಟುವಟಿಕೆಗಳನ್ನು ತೀವ್ರಗೊಳಿಸಬೇಕೆಂದು ತೀರ್ಮಾನಿಸಲಾಯಿತು. ಸಭೆಯಲ್ಲಿ ರಾಜ್ಯ ಸಮಿತಿಯ ಉಪಾಧ್ಯಕ್ಷ ಮಹಾಬಲ ವಡೇರ ಹೋಬಳಿ ಹಾಗೂ ಶಿವಾನಂದ ಕೋಡಿ ಭಾಷಣ ಮಾಡಿದರು. ರಾಜ್ಯ ಸಮಿತಿಯ ತೀರ್ಮಾನಗಳನ್ನು, ಸದಸ್ಯತ್ವದ ಹೆಚ್ಚಳವನ್ನು ಭರದಿಂದ ನಡೆಸಬೇಕೆಂದು ಮಹಾಬಲ ವಡೇರ ಹೋಬಳಿ ತಿಳಿಸಿದರು. ಕೊನೆಯಲ್ಲಿ ಹೊಸ ಕಮಿಟಿಯನ್ನು ರಚಿಸಲಾಯಿತು. ಅಧ್ಯಕ್ಷ-ನಾಗಪ್ಪ ಆಲೂರು; ಉಪಾಧ್ಯಕ್ಷ—ಬಾಬಣ್ಣ, ಕಾರ್ಯದರ್ಶಿ-ವಿ. ಗೋವಿಂದ, ಜೊತೆ ಕಾರ್ಯದರ್ಶಿ-ಶಿವರಾಮ, ಕೋಶಾಧಿಕಾರಿ-ವಿ. ನಾರಾಯಣ, ಕ್ರೀಡಾ ಕಾರ್ಯದರ್ಶಿ - ವಿ. ಕೃಷ್ಣ, ಸಹ ಕ್ರೀಡಾ ಕಾರ್ಯದರ್ಶಿ—ಟಿ. ನರಸಿಂಹ, ಸದಸ್ಯರು-ಶೀನದಾಸ, ಆನಂದ, ಲಕ್ಷ್ಮಣ, ಬಾಬು.ವಿ., ನರಸಿಂಹ, ಗೋಪಾಲ, ಇವರುಗಳನ್ನು ಆರಿಸಲಾಯಿತು ಸಭೆಯ ಪ್ರಾರಂಭದಲ್ಲಿ ನಾಗಪ್ಪ ಆಲೂರು ಸ್ವಾಗತಿಸಿದರು. ಮತ್ತು ಶಿವರಾಮ್ ವಂದಿಸಿದರು.

●

ಕರಾಳ ಪತ್ರಿಕಾ ಮಸೂದೆಯನ್ನು ವಿರೋಧಿಸಿ

ಬಿಹಾರದಾದ್ಯಂತ ಯಶಸ್ವೀ ಬಂದ್

ಜಗನ್ನಾಥ ಮಿಶ್ರಾ ಸರಕಾರ ತಂದಿರುವ ಕರಾಳ ಪತ್ರಿಕಾ ಮಸೂದೆಯನ್ನು ವಿರೋಧಿಸಿ ಸೆಪ್ಟೆಂಬರ್ 10 ರಂದು ಬಿಹಾರದಾದ್ಯಂತ ಯಶಸ್ವೀ ಬಂದ್ ನಡೆಯಿತು. ಹನ್ನೊಂದು ವಿರೋಧ ಪಕ್ಷಗಳು, ಕಾರ್ಮಿಕ ಸಂಘಟನೆಗಳು, ರಾಜ್ಯ ಸರಕಾರಿ ನೌಕರರ, ನ್ಯಾಯವಾದಿಗಳ, ವಿದ್ಯಾರ್ಥಿಗಳ ಸಂಘಟನೆಗಳು ಈ ಬಂದ್‌ಗೆ ಕರೆ ನೀಡಿದ್ದವು.

ಬಿಹಾರಿನ ಎಲ್ಲ ನಗರ-ಪಟ್ಟಣಗಳು, ಕೈಗಾರಿಕಾ ಕೇಂದ್ರಗಳಲ್ಲಿ ದಿನನಿತ್ಯದ ಚಟುವಟಿಕೆಗಳು ಸ್ಥಬ್ಧವಾಗಿದ್ದವು. ಎಲ್ಲೆಡೆ ಪ್ರತಿಭಟನಾ ಮೆರವಣಿಗೆಗಳು ನಡೆದವು. ಈ ಬಂದ್‌ನ್ನು ವಿಫಲಗೊಳಿಸಲು ರಾಜ್ಯ ಸರಕಾರ ಎಲ್ಲ ಬಗೆಯ ಕುತಂತ್ರಗಳನ್ನು ಹೂಡಿದರೂ ಜನತೆ ಕಿವಿಗೊಡಲಿಲ್ಲ.

ನಾಚಿಕೆಗೆಟ್ಟ ಮಿಶ್ರಾರವರು ಬಂದ್ ಸಂಪೂರ್ಣ ವಿಫಲವಾಗಿದೆಯೆಂದು ಬಣ್ಣಿಸಿದರು. ಪಾಟ್ನಾದ ಆರು ಪ್ರಮುಖ ದೈನಿಕಗಳು ಪ್ರಕಟಿಸಿರುವ ಅನೇಕ ಛಾಯಾಚಿತ್ರಗಳು ಮಿಶ್ರಾರ ಮಾತುಗಳು ಹಸೀ ಸುಳ್ಳೆಂಬುದನ್ನು ಸಾಬೀತುಪಡಿಸಿವೆ. ಬಂದ್‌ನ ಹಿಂದಿನ ದಿನ ಸುಮಾರು 60 ಟ್ರಕ್ ಮತ್ತಿತರ ಬಾಡಿಗೆ ವಾಹನಗಳಲ್ಲಿ ಹೊರಗಿನಿಂದ ಜನರನ್ನು ಕರೆತಂದು ಪಾಟ್ನಾದಲ್ಲಿ ನಡೆದ ಸಭೆಯೊಂದನ್ನುದ್ದೇಶಿಸಿ ಜಗನ್ನಾಥ ಮಿಶ್ರಾ ಮಾತನಾಡಿ ಬಂದ್‌ಗೆ ಕರೆ ಕೊಟ್ಟವರನ್ನು ಸಮಾಜದ್ರೋಹಿಗಳೆಂದು ಜರೆದರು.

ಬಂದ್ ದಿನ ಬೇರೆ ಬೇರೆ ವಿರೋಧ ಪಕ್ಷಗಳ ನಾಯಕರ ನೇತೃತ್ವದಲ್ಲಿ ನಡೆದ ಮೆರವಣಿಗೆಗಳ ಮೇಲೆ ಪೋಲಿಸರು ಲಾಠೀ ಪ್ರಹಾರ ಮಾಡಿದರು. ನೂರಾರು ಬಂಧನಗಳು ನಡೆದವು. ಇತ್ತೀಚಿಗೆ ತಾನೆ (ಸೆಪ್ಟೆಂಬರ್ 3) ಈ ಮಸೂದೆಯನ್ನು ವಿರೋಧಿಸಿ ರಾಷ್ಟ್ರದಾದ್ಯಂತ ಪತ್ರಕರ್ತರ ಯಶಸ್ವೀ ಮುಷ್ಕರ ನಡೆದುದನ್ನು ಇಲ್ಲಿ ನೆನೆಯಬಹುದು.

ಈ ಮಸೂದೆಗೆ ಪ್ರತಿಭಟನೆ ಸೂಚಿಸಿ ಎಲ್ಲ ವಿರೋಧ ಪಕ್ಷಗಳು ಸುಮಾರು 10 ಲಕ್ಷ ಜನರ ಸಹಿಯನ್ನೊಳಗೊಂಡ ಮನವಿಯೊಂದನ್ನು ಅಕ್ಟೋಬರ್ 12 ರಂದು ರಾಜ್ಯಪಾಲರಿಗೆ ಸಲ್ಲಿಸಲಿವೆ.

●

ಧಾರವಾಡ :

ಟ್ಯೂಶನ್ ಹಾವಳಿ ವಿರುದ್ಧ ಜನಾಭಿಪ್ರಾಯ ರೂಪಿಸಲು ವಿಚಾರ ಸಂಕಿರಣ

ಶಾಲಾ-ಕಾಲೇಜುಗಳ ಪ್ರಾಧ್ಯಾಪಕರುಗಳು ಖಾಸಗಿಯಾಗಿ ಟ್ಯೂಶನ್ ಹೇಳಬಾರದೆಂದು ಸರಕಾರದ ಆದೇಶ ಇದ್ದಾಗ್ಯೂ ಕೆಲವು ಶಿಕ್ಷಕರು ತಮ್ಮ ಕರ್ತವ್ಯವನ್ನು ಮೂಲೆಗೊತ್ತಿ ವಿದ್ಯಾರ್ಥಿಗಳನ್ನು ಖಾಸಗಿಯಾಗಿ ನಡೆಯುತ್ತಿರುವ ಟ್ಯೂಶನ್ ಕ್ಲಾಸುಗಳಿಗೆ ಬರುವಂತೆ ಅನೇಕ ತಂತ್ರಗಳನ್ನು ನಡೆಸುವುದನ್ನು ಕಾಣುತ್ತೇವೆ. ಮುಖ್ಯವಾಗಿ ಶಾಲಾ ಕ್ಲಾಸುಗಳಲ್ಲಿ ಪಠ್ಯ ಹೇಳುವಾಗ ಅಲಕ್ಷತೆ, ತಮ್ಮ ಖಾಸಗಿ ಟ್ಯೂಶನ್ ಕ್ಲಾಸುಗಳಿಗೆ ಬರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳ ಆಶೆ ತೋರಿಸುವುದು, ತಾರತಮ್ಯ ಮಾಡುವುದು ಇತ್ಯಾದಿ ನಡೆಯುತ್ತಿದೆ. ಈ ಹಾವಳಿ ವಿರುದ್ಧ ಜನಾಭಿಪ್ರಾಯ ರೂಪಿಸುವ ಸ್ತುತ್ಯ ಪ್ರಯತ್ನವೊಂದು ಡಿ. ವೈ. ಎಫ್. ಐ. ಜಿಲ್ಲಾ ಘಟಕದ ನೇತೃತ್ವದಲ್ಲಿ ನಡೆಯಿತು.

ಇದರ ಅಂಗವಾಗಿ ಸೆಪ್ಟೆಂಬರ್ 2 ರಂದು ಧಾರವಾಡದಲ್ಲಿ ವಿಚಾರ ಸಂಕಿರಣವೊಂದು ನಡೆಯಿತು. ಜಿಲ್ಲೆಯ ಡಿ.ಡಿ.ಪಿ.ಐ. ಶ್ರೀ ಎಸ್. ಜಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಭಾಷಣಕಾರರಾಗಿ ಶ್ರೀ ಆರ್. ಎಸ್. ಬಂಗೇರಾ, ವಿ. ಎನ್. ದೇಶಪಾಂಡೆ, ವಿ. ಎನ್. ಹಳಕಟ್ಟಿ, ಶಿದ್ದನಗೌಡ ಪಾಟೀಲ ಮತ್ತು ಶಿವಾನಂದ ಶೆಟ್ಟರ ಆಗಮಿಸಿದ್ದರು.

ಆರಂಭದಲ್ಲಿ ಕಾಂ। ವಿ. ಜಿ.ಕಮ್ಮಾರ ಸ್ವಾಗತಿಸಿದರು. ಕಾಂ। ಜಿ. ಸಿ. ವೈ. ಮಠ ಅವರು ವಂದಿಸಿದರು.

ಕರ್ನಾಟಕ ರಾಜ್ಯದಲ್ಲಿ:

ಆರ್ಥಿಕ ಅಪರಾಧಗಳ ವಿಚಾರಣೆಗೆ ವಿಶೇಷ ಕೋರ್ಟು

—ಎಸ್ಕೆ

ಕರ್ನಾಟಕದ ಮುಖ್ಯ ನ್ಯಾಯಾಧೀಶ ಡಿ. ಎಂ. ಚಂದ್ರಶೇಖರ್ ಅವರು ನಗರದಲ್ಲಿ (ಬೆಂಗಳೂರಿನಲ್ಲಿ) ಆರ್ಥಿಕ ಅಪರಾಧಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿದರಂತೆ. ಜಿಲ್ಲಾ ಅಥವಾ ಪ್ರಾದೇಶಿಕ ಮಟ್ಟದಲ್ಲೂ ಇಂಥ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದಂತೆ.

ಮಂತ್ರಿಗಳೂ— ರಾಜಕಾರಣಿಗಳೂ ದೀಪ ಬೆಳಗಿ—ಪೂಜೆ ಮಾಡಿ ಉದ್ಘಾಟನೆ ಸಮಾರಂಭಗಳನ್ನು ನೆರವೇರಿಸುತ್ತಾರೆ. ಅಂಥವರಿಗೆ ಯಾವ ಜವಾಬ್ದಾರಿಯೂ ಇಲ್ಲದ ಕಾರಣ ಅಂಥ ಕೆಲಸಗಳು ಅವರ ಹಸ್ತದಿಂದ-ಅಲ್ಲ ಅಮೃತ ಹಸ್ತದಿಂದ– ನಡೆಯುತ್ತಲೇ ಇರುತ್ತವೆ. ಆದರೆ ಒಬ್ಬ ನ್ಯಾಯಾಧೀಶನೂ ಮಂತ್ರಿಗಳಂತೆ ಅದೂ ಕೂಡ ಆರ್ಥಿಕ ಅಪರಾಧಗಳ ವಿಚಾರಣೆಗಾಗೆ ವಿಶೇಷ ನ್ಯಾಯಾಲಯವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸುತ್ತಾರೆಂದು ಹೇಳಿದರೆ ನಮ್ಮಲ್ಲಿ ಸಾಮಾಜಿಕ ತಿಳುವಳಿಕೆ ಎಷ್ಟರ ಮಟ್ಟಿಗಿದೆಂದು ತಿಳಿಯುತ್ತದೆ. ಇನ್‌ಸಾಟ್ ತಯಾರಿಸಿದ ವಿಜ್ಞಾನಿಗಳೇ ಅದನ್ನು ಆಕಾಶಕ್ಕೆ ಹಾರಿಸುವ ಮುಂಚೆ ಅದಕ್ಕೆ ಪೂಜೆ ಸಲ್ಲಿಸಿದರೆಂಬ ವಾರ್ತೆ ಕೇಳಿದಾಗ "ದೈವೀ ಭಾವನೆ, ದೈವೀ ಶಕ್ತಿ"ಯಿಂದ ಮುಕ್ತರಾಗಿಲ್ಲ. ವಿಜ್ಞಾನ, ಸಂಶೋಧನೆಗಳಿಂದ ತಾನು ಗಳಿಸಿದ ಅನುಭವಗಳನ್ನೆಲ್ಲ ಭ್ರಮೆಯಲ್ಲೇ ಭ್ರಮಣಗೊಳಪಡಿಸುತ್ತಿರುವ ವೈಶಿಷ್ಟ್ಯ ಭಾರತ ದೇಶಕ್ಕಷ್ಟೇ ಮೀಸಲಾಗಿದ್ದಂತೆ ಕಂಡು ಬರುತ್ತದೆ.

ವಿಶೇಷ ನ್ಯಾಯಾಲಯವಂತೂ ಸ್ಥಾಪನೆಯಾಯಿತು. ಇನ್ನು ಆರ್ಥಿಕ ಅಪರಾಧವೆಂದರೇನು ? ಯಾವ ಕಾನೂನುಗಳ ಆಧಾರದಲ್ಲಿ ಅಂಥ ಅಪರಾಧಗಳ ಚೌಕಾಶಿಯಾಗುವುದು ? ಇವುಗಳಿಗಾಗಿ ಪ್ರತ್ಯೇಕ ಕಾನೂನುಗಳಿವೆಯೇ ? ಅವುಗಳೆಲ್ಲ ಇಲ್ಲದಿದ್ದರೆ ಇಂಥ ವಿಶೇಷ ನ್ಯಾಯಾಲಯಗಳಿಂದ ಏನು ಉಪಯೋಗ— ಅವುಗಳನ್ನೆಲ್ಲ ಈಕ್ಷಿಸಿ ನೋಡಬೇಕಾಗಿದೆ. ಕಾಂಗ್ರೆ ಆಡಳಿತೆಯ ಕಾಯಿದೆ ಕಾನೂನು, ನ್ಯಾಯಾಲಯಗಳೆಲ್ಲ ಎಷ್ಟು ಆಳವಾಗಿವೆಂಬುದನ್ನು ಚೆನ್ನಾಗಿ ಬಲ್ಲ ಆರ್ಥಿಕ ಅಪರಾಧಿಗಳು ವಿಶೇಷ ನ್ಯಾಯಾಲಯಗಳ ಶಿಕ್ಷೆಗೆ ಗುರಿಯಾಗುತ್ತಾರೆಂದು ಯಾರಾದರೂ ತಿಳಿದಿದ್ದರೆ....ಮುಖ್ಯ ನ್ಯಾಯಾಧೀಶರು ದೀಪ ಬೆಳಗಿ ವಿಶೇಷ ನ್ಯಾಯಾಲಯವನ್ನು ಉದ್ಘಾಟಿಸದೆ, ಆರ್ಥಿಕ ಅಪರಾಧಿಯೊಬ್ಬನನ್ನು ಶಿಕ್ಷೆಗೊಳಪಡಿಸಿ, ನ್ಯಾಯಾಲಯವನ್ನು ಉದ್ಘಾಟಿಸುತ್ತಿದ್ದರೆ ಜನತೆ ಚಂದ್ರಶೇಖರ್ ಅವರನ್ನು ಶಿಖರಕ್ಕೇರಿಸುತ್ತಿತ್ತು. ಮತ್ತೊಂದು ನ್ಯಾಯಾಲಯ ಬಂತಷ್ಟೇ— ಆದರೆ ಪ್ರಯೋಜನವಿಲ್ಲೆಂದೇ ಜನರ ಭಾವನೆಯಲ್ಲವೇ ?

ವಿದ್ಯುನ್ಮಂಡಲಿ ಮಾಜಿ ಅಧ್ಯಕ್ಷನಿಗೆ ಭಾರೀ ಶಿಕ್ಷೆ-ದಂಡ

ಕರ್ನಾಟಕದಲ್ಲಿ ಆರ್ಥಿಕ ಅಪರಾಧಗಳ ವಿಚಾರಣೆಗೆ ನ್ಯಾಯಾಲಯವೊಂದು ಉದ್ಘಾಟಿಸಲ್ಪಡುತ್ತಿದ್ದಂತೆಯೇ ಮಹಾರಾಷ್ಟ್ರದ ನ್ಯಾಯಾಲಯ ರಾಜ್ಯ ವಿದ್ಯುಶ್ಛಕ್ತಿ ಮಂಡಲಿಯ ಹಿಂದಿನ ಅಧ್ಯಕ್ಷ ದುಧವೆ ಎಂಬವರಿಗೆ ಭ್ರಷ್ಟಾಚಾರ ಆರೋಪಕ್ಕಾಗಿ 2 ವರ್ಷಗಳ ಕಠಿಣ ಶಿಕ್ಷೆ ಹಾಗೂ 2 ಲಕ್ಷ ದಂಡ ವಿಧಿಸಿದ ಸುದ್ದಿ ಪ್ರಕಟವಾಗಿದೆ. ಬರೇ ಗಂಡನಿಗಷ್ಟೇ ಅಲ್ಲ ಅವರ ಪತ್ನಿ ಜಾನಕಿಗೂ ಕೂಡೂ 5 ಸಾವಿರ ದಂಡ ವಿಧಿಸಿ ನ್ಯಾಯವಿನ್ನೂ ಮಹಾರಾಷ್ಟ್ರದಲ್ಲಿ ಜೀವಂತವಿದೆಂಬುದನ್ನು ತೋರಿಸಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಅಂತುಳೆಯವರ ಪ್ರಕರಣದಲ್ಲಿ ಕೂಡ ಮಾಜಿ ಮುಖ್ಯ ಮಂತ್ರಿಯವರಿಗೆ ನ್ಯಾಯವೆಂದರೇನೆಂಬುದರ ರುಚಿ ತೋರಿಸುವ ಧಾರ್ಷ್ಯತೆ ಮಹಾರಾಷ್ಟ್ರದ ನ್ಯಾಯಾಲಯ ತೋರಿಸಿಕೊಟ್ಟಿದೆ.

ಆದರೆ ಕರ್ನಾಟಕದಲ್ಲಿ ಮಾತ್ರ ನಡೆದದ್ದೇನು ? ಕಳೆದ 4-5 ವರ್ಷಗಳದ್ದೇ ಲೆಖ್ಖ ತೆಗೆದದ್ದಾದರೆ ನೂರಾರು ಅಧಿಕಾರಿಗಳು ಭ್ರಷ್ಟಾಚಾರದ ಆರೋಪಗಳಿಂದಾಗಿ "ಸಸ್ಪೆಂಡ್" ಆಗಿರುವ ಸಂಗತಿ ಎಲ್ಲರೂ ತಿಳಿದ ವಿಷಯ. ಆದರೆ ಯಾರಿಗೂ ತಿಳಿಯಲಾರದ ವಿಷಯವೆಂದರೆ ಇವರಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂಬ ಸಂಗತಿ ಮಾತ್ರ. ಮಂತ್ರಿ ಇಬ್ರಾಹಿಂ ಮತ್ತು ಅವರ ತಮ್ಮ (ಕೊಲೆ ಪ್ರಕರಣ), ರಾಜೇಂದ್ರ್ರ ಮತ್ತು ಅವರ ಹೆಂಡತಿ ಮಂತ್ರಿವರ್ಯೆ ರೇಣುಕಾ ರಾಜೇಂದ್ರನ್ ಇವರ ಪ್ರಕರಣಗಳೆಲ್ಲ ಗಾಳಿಯಲ್ಲಿ ತೂರಿಹೋದವು. ಹಾಗೆಯೇ ಹಲವಾರ ಕ್ಲಾಸ್ I ಅಧಿಕಾರಿಗಳ ಇಂಜಿನಿಯರರ ಪ್ರಕರಣಗಳು ಕೂಡ, ಹಾಗೆಯೇ ನೀರಾವರಿ ಮಂತ್ರಿ ಚಿಮ್ಮನ ಕಟ್ಟಿಯವರು ಮಂತ್ರಿಯಾದ ಬಳಿಕ ಹಲವಾರು ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದ್ದು ಕೂಡ ಏನಾದವು ? ಆದರೆ ಮಹಾರಾಷ್ಟ್ರ ನ್ಯಾಯಾಲಯದ ಧೈರ್ಯ ಕರ್ನಾಟಕದ ಗಾಳಿ ಸೇವಿಸುವ ......ರಿಗೆ ಬರುತ್ತಿಲ್ಲವಲ್ಲ. ಇಂಡಿಯನ್ ಪೆನಲ್‌ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೂಡ ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತಿಲ್ಲವಲ್ಲ. ಅದರ ಅನುಷ್ಠಾನದಲ್ಲಿ ಮಾತ್ರ ಬದಲಾವಣೆ ಕಂಡು ಬರುತ್ತದಲ್ಲವೆ. ಕೈದಿಗಳ ಕಣ್ಣು ಕಿತ್ತಿ ತೆಗೆಯಲಾಗುತ್ತಿದೆ, ಹರಿಜನರನ್ನು ಕೊಲೆ ಮಾಡಲಾಗುತ್ತಿದೆ, ಪತ್ರಿಕಾಕರ್ತರನ್ನು ಬಡಿಯಲಾಗುತ್ತಿದೆ ಬಿಹಾರ ರಾಜ್ಯದಲ್ಲಿ. ಆದರೆ ಆಳುವ ಮುಖ್ಯ ಮಂತ್ರಿಯಾಗಲೀ, ಸಂಬಂಧಪಟ್ಟ ಅಧಿಕಾರಿಗಳಾಗಲೀ ಯಾವ ನ್ಯಾಯಾಲಯದ ಅಂಜಿಕೆಯಿಲ್ಲದೆ ಮೆರೆಯುತ್ತಿದ್ದಾರಲ್ಲ. ಆದ್ದರಿಂದ ನ್ಯಾಯದಾನ ಯಾವ ಪ್ರದೇಶದಲ್ಲಿ ಯಾವ ರೀತಿ ಅನುಷ್ಠಾನದಲ್ಲಿ ತರಲಾಗಿದೆಂಬುದನ್ನು ನೀವೇ ಕಣ್ಣು ರೆಪ್ಪೆ ಅಲುಗಾಡಿಸದೆ ನೋಡುತ್ತ ಹೋಗಬೇಕಂತೆ. ಇಂಥ ದುರ್ಗತಿಯಿಂದ ನಿಮ್ಮನ್ನೆಲ್ಲ ಬುದುಕಿಸುವ ಸಲುವಾಗಿಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೇಳುವುದೇನೆಂದರೆ ಇಂದಿರಾ ಸರಕಾರವನ್ನು ಕಿತ್ತೊಗೆದು, ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರಕಾರವನ್ನು ಅಧಿಕಾರಕ್ಕೆ ತರಬೇಕೆಂದು. ಅರ್ಥವಾಯಿತೇ ?

ಹರಿಜನ–ಗಿರಿಜನ ಹಾಸ್ಟಲ್‌ಗಳ ದುರ್ಗತಿ

ಸ್ವಾತಂತ್ರ್ಯ ಪಡೆದ 35 ವರ್ಷಗಳ ನಂತರವೂ ನಮ್ಮ ದೇಶದ ಶಿಕ್ಷಣದ ಅವಸ್ಥೆ ದುರ್ಗತಿಯದ್ದಾದರೆ ಮತ್ತೊಂದೆಡೆ ಎಲ್ಲ ವಿದ್ಯಾರ್ಥಿಗಳ ಅದರಲ್ಲೂ ಹರಿಜನ-ಗಿರಿಜನ ವಿದ್ಯಾರ್ಥಿಗಳಿಗಿರುವ ಹಾಸ್ಟೆಲ್‌ಗಳ ದುರ್ಗತಿ ಹೇಳತೀರದಾಗಿದೆ. ಹೋದ ವರ್ಷ ಎಸ್.ಎಫ್.ಐ. ನೇತೃತ್ವದಲ್ಲಿ ಹಲವಾರು ಹೋರಾಟಗಳು ನಡೆದವು. ಈ ವರ್ಷ ಕೂಡ, ಬೆಂಗಳೂರು, ಬಿಜಾಪುರ ಮತ್ತಿನ್ನಿತರ ಕಡೆಗಳಲ್ಲೆಲ್ಲ ಎಸ್.ಎಫ್.ಐ. ಹೋರಾಟಗಳನ್ನು ನಡೆಸುತ್ತಿದೆ. ಆಡಳಿತೆಗೆ ಬೇಸತ್ತು ಚಿತ್ರದುರ್ಗದ ಹರಿಜನ-ಗಿರಿಜನ ಹಾಸ್ಟೆಲ್ ವಾರ್ಡರುಗಳೇ ರಾಜೀನಾಮೆ ಕೊಡುವ ಪರಿಸ್ಥಿತಿ ಉಂಟಾಗಿದೆ.

ಬಿಳಿಟೊಪ್ಪಿಗೆ ಹಾಕಿಕೊಂಡವರೆಲ್ಲ ಹರಿಜನ-ಗಿರಿಜನ ಹಾಸ್ಟೆಲ್‌ಗಳ ಮಾಲಿಕರು. ಸರಕಾರದಿಂದ ಬರುವ ಅಲ್ಪ ಸಹಾಯ ಈ ಬಂಟರ ಗೋಣಿಚೀಲದಂತ ಕಿಸೆ ಸೇರುತ್ತದೆ. ಹಳ್ಳಿಗಳಿಂದ ಬರುವ ಬಡ ವಿದ್ಯಾರ್ಥಿಗಳಿಗೆ ಹೊಟ್ಟೆ ತುಂಬ ಅನ್ನಿಸಿಗುವುದಿಲ್ಲ. ಕಾಂಗ್ರೆಸ್ ಆಡಳಿತೆಯಂತೆ ಅದನ್ನು ನಾಚಿಸುವ ರೀತಿಯಲ್ಲಿ ಹಾಸ್ಟೆಲ್‌ಗಳು ಹೊಲಸು ನಾರುತ್ತಿವೆ. ಅನಾರೋಗ್ಯಕರವಾಗಿದೆ. ಮೇಲ್ಜಾತಿ-ಕೆಳಜಾತಿ ಪ್ರಶ್ನೆಯೂ ಅಡ್ಡಗಾಲಾಗಿದೆ. ಮೇಲ್ಜಾತಿಯ ಕೆಲವು ಶಿಕ್ಷಣ ಸಂಸ್ಥೆಗಳೇ ಉದಾಹರಣೆ ಬಿಜಾಪುರ ಜಿಲ್ಲೆಯ ಸಿಂದಗಿ, ಹೂವಿನ ಹಿಪ್ಪರಗಿ ಜೂನಿಯರ್ ಕಾಲೇಜುಗಳಂತ-ಈ ವರ್ಗದ ವಿದ್ಯಾರ್ಥಿಗಳಿಗೆ ಸರಿಯಾದ ವ್ಯವಸ್ಥೆ ಮಾಡದೆ ಮೋಸಮಾಡುವುದು ನಡೆದಿದೆ. ಎಸ್.ಎಫ್.ಐ. ಪ್ರಯತ್ನದಿಂದ ಹೂವಿನ ಹಿಪ್ಪರಗಿಯ ವಿದ್ಯಾರ್ಥಿಗಳು 16 ಮೈಲು ದೂರ ಬಾಗೇವಾಡಿಯವರೆಗೆ ಕಾಲ್ನಡಿಗೆಯಲ್ಲಿ ಬಂದು ತಮ್ಮ ತೊಂದರೆ ನಿವೇದಿಸಿಕೊಳ್ಳಬೇಕಾಯಿತು. ಚಳುವಳಿ ನಡೆದಾಗ ಕೆಲವು ದಿವಸ ವ್ಯವಸ್ಥೆ ಸುಧಾರಿಸುತ್ತವೆ. ಅನಂತರ ಹಳೇ ಪರಿಸ್ಥಿತಿಯೇ ಮುಂದುವರಿಯುತ್ತದೆ. ಇದು ನಮ್ಮ ಸಮಾಜ, ಅದರ ಪ್ರತೀಕ ಕಾಂಗ್ರೆ ಸರಕಾರ. ಸಮಾಜವೂ ಎರಡೂ ಬದಲಾಗಬೇಕು. ಇದರಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಧಾನವಾದದ್ದು. ಪ್ರತಿಯೊಂದು ಊರಲ್ಲೂ ಬಲಿಷ್ಠ ಎಸ್. ಎಫ್. ಐ. ಕಟ್ಟಬೇಕು. ಹಾಸ್ಟೆಲ್ ಸುಧಾರಣೆ, ಶಿಕ್ಷಣ ಪದ್ಧತಿಯಲ್ಲಿ, ಪಠ್ಯ ಪುಸ್ತಕದಲ್ಲಿ ಬದಲಾವಣೆ, ಶಾಲೆ-ಕಾಲೇಜುಗಳಲ್ಲಿ ಶಿಕ್ಷಣ ಪಡೆಯಲು ಬೇಕಾದ ಪರಿಸರ-ಇವುಗಳ ಸಲುವಾಗಿ ನಾವೂ ಹೋರಾಡಬೇಕು– ವಿದ್ಯಾರ್ಥಿಗಳು ಕೂಡ ಅದೇ ದಾರಿ ಹಿಡಿಯಬೇಕು. ●

ತುಮಕೂರು :

ಸಿ. ಪಿ. ಐ. (ಎಂ) ಜಿಲ್ಲಾ ಸಮಿತಿಯ ಆಶ್ರಯದಲ್ಲಿ

ರಾಜಕೀಯ ಸಮ್ಮೇಳನ

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಗ್ರಾಮದಲ್ಲಿ ತಾರೀಖು 19-9-82ನೇ ಭಾನುವಾರ ಸಿ. ಪಿ. ಐ. (ಎಂ) ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಜನರ ತುರ್ತು ಸಮಸ್ಯೆಗಳ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲು ಕಾರ್ಯಕ್ರಮ ಹಾಕಿಕೊಳ್ಳಲಾಯಿತು. ಸಣ್ಣ ಮಳೆ ಬೀಳುತ್ತಿದ್ದರೂ ನೂರಾರು ಸಂಖ್ಯೆಯಲ್ಲಿ ರೈತರು ಕೃಷಿ ಕೂಲಿಗಾರರು ವಿದ್ಯಾರ್ಥಿಗಳು ಅಧ್ಯಾಪಕರು ಮತ್ತಿತರ ಜನ ವಿಭಾಗದವರು ಸೇರಿ ದೇಶದ ಸ್ಥಳೀಯ ಸಮಸ್ಯೆಗಳನ್ನು ಕೂಲಂಕುಷವಾಗಿ ಚರ್ಚಿಸಿ ಕೆಲವು ತೀರ್ಮಾನಕ್ಕೆ ಬರಲಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ತಾಲ್ಲೂಕ್ ಬೋರ್ಡ್ ಸದಸ್ಯರಾದ ದೊಡ್ಡನಂಜಪ್ಪನವರು ವಹಿಸಿದ್ದರು.

ಸಮ್ಮೇಳನದ ಪ್ರಾರಂಭದಲ್ಲಿ ರೈತ ಸಂಘದ ಮುಖಂಡರಾದ ಹೆಚ್. ಸಿ. ಚನ್ನಪ್ಪನವರು ಮಾತನಾಡುತ್ತಾ, ಸ್ವತಂತ್ರ ಬಂದು 35 ವರ್ಷಗಳಾದರೂ ಹಳ್ಳಿಗಾಡಿನ ರೈತರ ಪರಿಸ್ಥಿತಿ ಹದಗೆಟ್ಟಿದೆ; ಈ ವರ್ಷವಂತೂ ಮಳೆ ಬಾರದೆ ಊರು ಬಿಟ್ಟು ಗುಳೇ ಹೋಗುತ್ತಿದ್ದಾರೆ. ಈ ಮಳೆ ಬಂದರೂ ಸುಧಾರಿಸುವ ಸ್ಥಿತಿಯಲ್ಲಿಲ್ಲ. ಇದಕ್ಕಾಗಿ ಖಾಯಂ ಆದ ಕ್ರಮಗಳನ್ನು ತೆಗೆದುಕೊಳ್ಳದೆ ಜನರಿಗೆ ಮುಕ್ತಿಸಿಗಲಾರದು. ಇದಕ್ಕೆ ಸಂಘಟಿತಹೋರಾಟ ಅಗತ್ಯವೆಂದರು. ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾದ ಕೆ.ಆರ್.ನಾಯಕ್‌ರವರುಮಾತನಾಡುತ್ತಾ ಊರಿನ ಕಿರಿಯ ಕಾಲೇಜು ಮುಚ್ಚಿ ಹೋಗಿ ತಿಂಗಳುಗಳೇ ಕಳೆದಿವೆ. ಅಧ್ಯಾಪಕರು, ವಿದ್ಯಾರ್ಥಿಗಳು ಕೂಡಿ ಮುಷ್ಕರ ನಡೆಸಿದ್ದಾರೆ. ಕಾಲೇಜಿನ ಆಡಳಿತದ ದುರಾಚಾರದಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಬೀದಿಪಾಲಾಗುವ ಪರಿಸ್ಥಿತಿ ಒದಗಿ ಬಂದಿದೆ. ಕೂಡಲೇ ಸರ್ಕಾರ ಈ ಕಾಲೇಜನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಅನಿರೀಕ್ಷಿತವಾಗಿ ಸಮ್ಮೇಳನಕ್ಕೆ ಆಗಮಿಸಿದ್ದ ವಿದ್ಯಾರ್ಥಿ ಫೆಡರೇಷನ್‌ನ್ನಿನ ರಾಜ್ಯ ಘಟಕದ ಕಾರ್ಯದರ್ಶಿಗಳಾದ ಎಸ್. ಆರ್. ಆರಾಧ್ಯರವರು ಕಾಲೇಜನ್ನು ಸರಕಾರ ವಹಿಸಿಕೊಳ್ಳದಿದ್ದಲ್ಲಿ ವಿದ್ಯಾರ್ಥಿಗಳನ್ನು ವಿಧಾನ ಸೌಧದವರೆಗೆ ಕೊಂಡಯ್ಯಲಾಗುವುದೆಂದು, ಇದಕ್ಕೆ ಎಲ್ಲ ಜನರ ಸಹಕಾರಬೇಕೆಂದು ಕೋರಿದರು. ಸ್ಥಳೀಯ ಶ್ಯಾನಬೋಗರಾದ 85 ವರ್ಷ ವಯಸ್ಸಿನ ಶ್ರೀ ಸುಬ್ಬರಾಯರು ಮಾತನಾಡುತ್ತಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಿಂದ ಮಾತ್ರ ಇಂಥಹ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವೆಂದರು. ನಂತರ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು:

1) ಕಿರಿಯ ಕಾಲೇಜನ್ನು ಸರಕಾರ ಕೂಡಲೇ ತನ್ನ ವಶಕ್ಕೆ ತೆಗೆದುಕೊಳ್ಳಬೇಕು.

2) ಹೇಮಾವತಿ ನಾಲೆಯು ಕಿಬ್ಬನಹಳ್ಳಿ, ಕೋಟೆ, ಹೊಸಕೆರೆ, ಚೇಳೂರು ಕೋರಾ ಮಾರ್ಗವಾಗಿ ಹಾದು ಹೋಗುವಂತೆ ಮಾಡಿ ಬರಗಾಲ ನಿವಾರಿಸಲು ಖಾಯಂ ಪರಿಹಾರ ಕೈಗೊಳ್ಳಬೇಕೆಂದೂ ಸರ್ಕಾರವನ್ನು ಒತ್ತಾಯಿಸಲಾಯಿತು.

3) ಮಾದೇನಳ್ಳಿ, ಅಂಕಸಂದ್ರ ಈ ಗ್ರಾಮಗಳಿಗೆ ಆಸ್ಪತ್ರೆ, ಹೈಸ್ಕೂಲುಗಳನ್ನೂ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಯಿತು.

4) ಸ್ವೈರಪಂಡರಿ ಪದವೀಧರರಿಗೆ ಉದ್ಯೋಗ, ಪಿ ಡಬ್ಲ್ಯೂ. ಡಿ. ಕೆಲಸಗಾರರನ್ನು ಖಾಯಂಗೊಳಿಸುವುದು, ವಿದ್ಯುದ್ದೀಪವಿಲ್ಲದೆ ಇರುವ ಹಳ್ಳಿಗೆ ವಿದ್ಯುತ್

(6ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ:

ಆರ್ಥಿಕ ಹಿಂಜರಿತ ೬ನೇ ಯೋಜನೆ ಜಾರುವ ದಾರಿಯಲ್ಲಿ

—ಆರ್. ಚಂದ್ರ

ಆರನೇ ಪಂಚವಾರ್ಷಿಕ ಯೋಜನೆಯು (1980-81 ರಿಂದ 1985-86) ಜಾರುವ ದಾರಿಯಲ್ಲಿದೆ. ಈ ಯೋಜನೆಗೆ 1979-80ರ ಬೆಲೆ ಮಟ್ಟದಲ್ಲಿ ರೂ. 97,500 ಕೋಟಿ ವೆಚ್ಚವಾಗಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಅಂದಿನಿಂದ ಬೆಲೆ ಏರಿಕೆ, ಹಣದುಬ್ಬರ ನಾಗಾಲೋಟದಲ್ಲಿ ನಡೆಯುತ್ತಿದ್ದು, 1980-81ರ ಬೆಲೆ ಮಟ್ಟದಲ್ಲಿಯೇ ಆರನೇ ಯೋಜನೆಗೆ ಇನ್ನೂ ರೂ 1000 ಕೋಟಿ ಹೆಚ್ಚು ಖರ್ಚಾಗಬಹುದೆಂದು ನಿರೀಕ್ಷಿಸಲಾಗಿದೆ. 1980ರ ಆಗಸ್ಟ್‌ನಲ್ಲಿ ಸಗಟು ವ್ಯಾಪಾರದ ಬೆಲೆ ಸೂಚಿಯು (1970–100) 259ಕ್ಕೇರಿದ್ದು 1982ರ ಜುಲೈ ಅಪ್ಪರಲ್ಲಿ 298ಕ್ಕೆ ನೆಗೆದಿದೆ! ಈಗಿನ ಬೆಲೆ ಮಟ್ಟದಲ್ಲಿ ಮತ್ತು ಇನ್ನೂ ಏರುತ್ತಿರುವ ಬೆಲೆ ಮಟ್ಟದಲ್ಲಿ ಈಗಿನ ಯೋಜನೆಗೆ ಇನ್ನೂ ಕೆಲವು ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು! ಇಷ್ಟು ಬೃಹತ್ ಪ್ರಮಾಣದ ಸಂಪನ್ಮೂಲಗಳನ್ನು ಎಲ್ಲಿಂದ ಒಟ್ಟುಗೂಡಿಸುವುದು?

ಬಂಡವಾಳಗಾರರ, ಭೂಮಾಲಿಕರ, ಶ್ರೀಮಂತ ರೈತರ, ವ್ಯಾಪಾರಿಗಳ ಲಾಭಾಂಶಗಳ ಮೇಲೆ ತೆರಿಗೆ ಹೆಚ್ಚಿಸಲಾಗುವುದೇ? ಕಪ್ಪು ಹಣವನ್ನು ಮುಟ್ಟುಗೋಲು ಹಾಕಲಾಗುವುದೇ? ಕಳ್ಳಸಂತೆ, ಅಕ್ರಮ ಸಂಗ್ರಹ, ಕಳ್ಳ ಸಾಗಣಿಕೆ, ಭ್ರಷ್ಟಾಚಾರ, ಇತ್ಯಾದಿಗಳನ್ನು ಹೋಗಲಾಡಿಸಲಾಗುವುದೇ? ಇಲ್ಲ! ಇಂದಿರಾ ಗಾಂಧಿಯು ಅಧ್ಯಕ್ಷತೆಯಲ್ಲಿ 19-8-82 ರಂದು ನಡೆದ ಯೋಜನಾ ಆಯೋಗದ ಸಭೆಯ ಸಲಹೆಗಳು ಪುನಃ ಬಡವರ ಹೊಟ್ಟೆಗೆ ಹೊಡೆಯುವುದೇ ಆಗಿವೆ. ಸ್ವಾವಲಂಬನೆಯ ಗುರಿ ಬಿಟ್ಟು ವಿದೇಶಿ ಸಹಾಯಕ್ಕೇ ಶರಣು ಹೋಗುವುದೇ ಆಗಿದೆ. ಅಪ್ರತ್ಯಕ್ಷ ತೆರಿಗೆ ಏರಿಕೆ, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ ಮುಂತಾದವುಗಳ ದರ ಏರಿಕೆ; ಪೆಟ್ರೋಲ್, ಸಿಮೆಂಟ್, ಉಕ್ಕು, ರಸಗೊಬ್ಬರ, ಇತ್ಯಾದಿಗಳ ಬೆಲೆ ಏರಿಕೆ; ವಿದೇಶಿಸಾಲ, ಆಂತರಿಕ ಸಾಲ, ಕೃತಕ ಹಣಸೃಷ್ಟಿ, ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಗಳ ವೆಚ್ಚದ ಕಡಿತ, ವೇತನ ಸ್ಥಗಿತ ಹಾಗೂ ಕಡಿತ, — ಇವೇ ಇಂದಿರಾ ಗಾಂಧಿಯು ಅಧ್ಯಕ್ಷತೆಯಲ್ಲಿ ನಡೆದ ಯೋಜನಾ ಆಯೋಗದ ಸಭೆಯ ಸಲಹೆಗಳು!

ಇಂತಹ ಯೋಜನೆಗಳ ಸಾಧನೆಗಳಾದರೂ ಏನು? ಅದರ ನಡುಗಾಲದ ಪರಿಶೀಲನೆ ಏನು ತಿಳಿಸುತ್ತದೆ? ಕೇಂದ್ರ ಹಾಗೂ ರಾಜ್ಯ ಸರಕಾರಗಳು ಯೋಜನೆಯ ಗುರಿಸಾಧಿಸಲು ವಿಫಲವಾಗಿವೆ ಎಂದು ವಿವಿಧ ಇಲಾಖೆಗಳ, ಮಂತ್ರಿಗಳ ಖಾತೆಗಳ ವರದಿಗಳಿಂದ ತಿಳಿದು ಬಂದಿದೆ. ಕೈಗಾರಿಕೆ, ಇಂಧನ, ಸಾರಿಗೆ, ಮತ್ತಿತರ ಪ್ರಮುಖ ಕ್ಷೇತ್ರಗಳಲ್ಲಿ ಯೋಜನೆಯಲ್ಲಿ ಭಾರೀ ಹಿಂದೇಟು ಅನುಭವಿಸಿವೆ ಸಂಪನ್ಮೂಲ ಸಂಗ್ರಹದಲ್ಲಿಯೂ ಭಾರೀ ಹಿನ್ನಡೆ. ಯೋಜನೆಯ ಗುರಿಗಳನ್ನು (Targets) ಕಡಿತಗೊಳಿಸಿ ಕೆಲವೇ ಆಯ್ದ ಕ್ಷೇತ್ರಗಳಿಗೆ (core sectors) ಗಮನ ಕೊಡಲು ಆಯೋಗ ಆಲೋಚಿಸುತ್ತಿದೆ. ಅಂದರೆ, ಜನ ಸಾಮಾನ್ಯರಿಗೆ ಅತ್ಯಗತ್ಯವಾದ ಆಹಾರ, ಆರೋಗ್ಯ, ವಸತಿ, ಶಿಕ್ಷಣ, ಉದ್ಯೋಗ, ಇತ್ಯಾದಿ ವಿಷಯಗಳನ್ನು ಕೈಬಿಟ್ಟು, ಬಂಡವಾಳಗಾರರಿಗೆ, ಭೂಮಾಲಿಕರಿಗೆ ಅಗತ್ಯವಾದ ಕೆಲವೇ ಕ್ಷೇತ್ರಗಳಿಗೆ ಮತ್ತು ಆಡಳಿತ, ಪೋಲೀಸು, ಸೈನ್ಯ ಇಲಾಖೆಗಳಿಗೆ ಗಮನ ಕೊಡಲು ನಿರ್ಧರಿಸಲಾಗುತ್ತಿದೆ.

ಪರಿಣಾಮ? ಪುನಃ ನಿರುದ್ಯೋಗ, ನಿರಕ್ಷರತೆ, ಬಡತನ, ಅಸಮಾನತೆ, ಕೊರತೆ, ಬೆಲೆ ಏರಿಕೆ, ಹಣದುಬ್ಬರ ಸಮಸ್ಯೆಗಳು ಹೆಚ್ಚುವುವು. ಜನ ಸಾಮಾನ್ಯರ ಜೀವನ ಮಟ್ಟ ಕುಸಿದು, ಆಂತರಿಕ ಮಾರುಕಟ್ಟೆ ಬರಿದಾಗುವುದು. 1980ರ ಪ್ರಾರಂಭದಲ್ಲಿ ಇಂದಿರಾ ಗಾಂಧಿ ಪುನಃ ಅಧಿಕಾರಕ್ಕೆ ಬಂದಾಗ ಕೈಗಾರಿಕಾ ಕಾರ್ಮಿಕರಿಗೆ ಸಂಬಂಧಿಸಿದ ಗ್ರಾಹಕರ ಬೆಲೆ ಸೂಚಿ (1860-100) 364 ಆಗಿದ್ದು, 1992ರ ಏಪ್ರಿಲ್ ಅಪ್ಪರಲ್ಲಿ 459ಕ್ಕೇರಿದೆ!

ಈ ಮಧ್ಯೆ ದೇಶದ ವಿದೇಶಿ ವ್ಯಾಪಾರದ ಕೊರತೆಯು ಏರುತ್ತಲೇ ಇದೆ. 1980-81ರ ಅಂತ್ಯದಲ್ಲಿ ರೂ. 5800 ಕೋಟಿ ಕೊರತೆ ಇದ್ದುದು, 1981–82ರ ಅಂತ್ಯದಲ್ಲಿ ರೂ 6200 ಕೋಟಿಗೇರಿದೆ! ರಫ್ತು ವ್ಯಾಪಾರ ಕುಸಿಯುತ್ತಿದೆ, ಆಮದು ಹೆಚ್ಚುತ್ತಿವೆ. ವಿದೇಶಗಳಲ್ಲಿ, ಮುಖ್ಯವಾಗಿ ಗಲ್ಫ್ ರಾಷ್ಟ್ರಗಳಲ್ಲಿರುವ ನಮ್ಮ ಜನರಿಂದ ಸ್ವದೇಶಕ್ಕೆ ಹಣ ಪಾವತಿ ಕಡಿಮೆ ಆಗುತ್ತಿದೆ. ರಫ್ತು ಹೆಚ್ಚಿಸಿ, ಆಮದು ನಿಯಂತ್ರಿಸದಿದ್ದರೆ, ವಿದೇಶಿ ವ್ಯಾಪಾರದಲ್ಲಿ ಇನ್ನಷ್ಟು ಕೊರತೆ, ಬಿಕ್ಕಟ್ಟು ಉಂಟಾಗುವುದು. ಆದರೆ, ಅಂತರರಾಷ್ಟ್ರೀಯ ಹಣಕಾಸು ಪರಿಸ್ಥಿತಿಯಿಂದ ಪಡೆದ ಸಾಲದ ಶರತ್ತಿನಂತೆ ಆಮದು ಹೆಚ್ಚಿಸಬೇಕು, ರಫ್ತು ಕಡಿಮೆಮಾಡಬೇಕು! ಸ್ವಾವಲಂಬನೆ ಕೈಬಿಡಬೇಕು, ವಿದೇಶಿ ಬಂಡವಾಳಶಾಹಿ ರಾಷ್ಟ್ರಗಳನ್ನು ಹೆಚ್ಚು ಅವಲಂಬಿಸಬೇಕು! ಆ ನಿಟ್ಟಿನಲ್ಲಿ ನಮ್ಮ ದೇಶದ ಆರ್ಥಿಕ ಧೋರಣೆಯನ್ನು ರೂಪಿಸಲು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಒತ್ತಾಯಿಸುತ್ತಲೇ ಇರುವುದು.

ನೆರೆ, ಬರಗಾಲದಂತಹ ಪ್ರಕೃತಿಯ ವಿಕೋಪಗಳಿಂದಲೂ ದೇಶದ ಆರ್ಥಿಕ ಪರಿಸ್ಥಿತಿಯು ತೀರಾಹದಗೆಡುತ್ತಿದೆ. ಇವುಗಳಿಂದ ಅಪಾರ ಕಷ್ಟ ನಷ್ಟಗಳಾದುದೇ ಅಲ್ಲದೆ, ಆಹಾರೋತ್ಪಾದನೆ, ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಉತ್ಪಾದನೆ ಯೋಜನೆಯ ನಿರೀಕ್ಷೆಗಿಂತ ಬಹಳ ಹಿಂದೆ ಬೀಳಲಿದೆ. 1981-82 ವರ್ಷಕ್ಕೆ 138 5 ಮಿ. ಟನ್ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ ಇದ್ದಿದ್ದರೂ, 132 ಮಿ. ಟನ್‌ಗಳಷ್ಟೇ ಸಾಧ್ಯವಾಯಿತು. ದೇಶದಲ್ಲಿ ಸದ್ಯ ಸಂಭವಿಸಿದ ವ್ಯಾಪಕ ಪ್ರವಾಹ, ಬರಗಾಲಗಳಿಂದಾಗಿ 1982-83ರ ವರ್ಷದಲ್ಲಿ 141 5 ಮಿ. ಟನ್ ಆಹಾರೋತ್ಪಾದನೆಯ ಗುರಿ ಮುಟ್ಟುವುದು ಅಸಾಧ್ಯ

1982ರ ಮೊದಲ ಅರ್ಧಾವಧಿಯಲ್ಲಿ ಕೈಗಾರಿಕಾ ಉತ್ಪಾದನೆಯೂ ಇಳಿಮುಖವಾಗುತ್ತಿದೆ. ಆದರೆ, ಕುಸಿಯುತ್ತಿರುವ ಉತ್ಪಾದನೆಗನುಗುಣವಾಗಿಯೂ ಆಂತರಿಕ ಮಾರುಕಟ್ಟೆ ಸಿಗದೆ ಆರ್ಥಿಕ ಹಿಂಜರಿತ ಒಂದಾದ ಮೇಲೆ ಒಂದು ಕೈಗಾರಿಕೆಗೆ ಹರಡಿ ದುಷ್ಪರಿಣಾಮ ಬೀರುತ್ತಿದೆ. ಸಣ್ಣ ಹಾಗೂ ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳು ದಿವಾಳಿಯಾಗುತ್ತಿವೆ. ಬ್ಯಾಂಕುಗಳಿಂದ ಸಾಲ ಪಡೆದ ಸುಮಾರು 6000ಕ್ಕೂ ಹೆಚ್ಚಿನ ಇಂತಹ ಸಂಸ್ಥೆಗಳು ರೋಗಗ್ರಸ್ಥವಾಗಿವೆ ಎಂದು ತಿಳಿದು ಬಂದಿದೆ. ಇವುಗಳು ಬ್ಯಾಂಕುಗಳಿಂದ ಪಡೆದ ಸಾಲದ ಮೊತ್ತ ರೂ. 2300 ಕೋಟಿಗೂ ಮಿಕ್ಕಿದೆ. ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಆಂತರಿಕ ಮಾರುಕಟ್ಟೆ ಇಲ್ಲದೆ, ಬ್ಯಾಂಕು ಸಾಲ ಸೌಲಭ್ಯಗಳಿಲ್ಲದೆ ಅನೇಕ ಕೈಗಾರಿಕೆಗಳ ಉತ್ಪಾದನೆಗಳು ಉಗ್ರಾಣಗಳಲ್ಲಿ ನೆನೆಗುದಿಬಿದ್ದಿವೆ. ಕೇಂದ್ರ ಮಂತ್ರಿಗಳು, ಏಕಸ್ವಾಮ್ಯ ಕೈಗಾರಿಕೋದ್ಯಮಿಗಳು ಆಂತರಿಕ ಮಾರುಕಟ್ಟೆಯ ಕುಸಿತದಿಂದಾಗಿ ಉಂಟಾದ ತೀವ್ರ ಆರ್ಥಿಕ ಹಿಂಜರಿತವನ್ನು ಮರೆಮಾಚಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅವರದ್ದು ವ್ಯರ್ಥ ಪ್ರಯತ್ನ. ಬೆಲೆ ಏರಿಕೆ, ಹಣದುಬ್ಬರದಂತಹ 'ಬಿಸಿ' ಜ್ವರ ಪೀಡಿತ ಆರ್ಥಿಕ ವ್ಯವಸ್ಥೆ ಈಗ ದೇಶ ವಿದೇಶಗಳಲ್ಲಿ ಮಾರುಕಟ್ಟೆಗಳಿಲ್ಲದ ತೀವ್ರ ಆರ್ಥಿಕ ಹಿಂಜರಿತದಂತಹ 'ಚಳಿ' ಜ್ವರವೂ ಭಾದಿಸುತ್ತಿದೆ! ಇವೆರಡೂ ಕಾಯಿಲೆಗಳು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಅನಿವಾರ್ಯ ಅನಾಹುತಗಳು. 'ಬಿಸಿ' ಮತ್ತು 'ಚಳಿ' ಜ್ವರಗಳು-ಹಣದುಬ್ಬರ ಮತ್ತು ಆರ್ಥಿಕ ಹಿಂಜರಿತ ಒಟ್ಟೊಟ್ಟಿಗೇ ಬರುವುದೆಂದರೆ ಪರಿಸ್ಥಿತಿ ಇನ್ನಷ್ಟೂ ಗಂಭೀರ!

ಎಷ್ಟೇ ಮುಚ್ಚುಮರೆ ಮಾಡಿದರೂ ಆರ್ಥಿಕ ಹಿಂಜರಿತ ವಾಸ್ತವಿಕ ಸತ್ಯ. ಹೆಚ್ಚಿನ ಕೈಗಾರಿಕೆಗಳಲ್ಲಿ ಉತ್ಪಾದನೆಗಳು ಗೋದಾಮುಗಳಲ್ಲಿ ಗಿರಾಕಿಗಳಿಲ್ಲದೆ ಕೊಳೆಯುತ್ತಿವೆ. ಹತ್ತಿ ಬಟ್ಟೆ ಕೈಗಾರಿಕೆಗೆ 1980ರಷ್ಟರಲ್ಲಿಯೇ ಹಿಂಜರಿತದ ಕಾಯಿಲೆ ಪ್ರಾರಂಭವಾದದ್ದು ಇನ್ನೂ ಮುಂದುವರಿಯುತ್ತಿದೆ. ಈ ಸಮಸ್ಯೆ ಹೋಗಲಾಡಿಸಲು, ನಷ್ಟ ಭರತಿಗೊಳಿಸಲು ಕಾರ್ಮಿಕರ ವೇತನ ಪರಿಷ್ಕರಣ ಮಾಡದೆ ವೇತನ ಸ್ಥಗಿತ, ಕಡಿತ ಮಾರ್ಗವನ್ನು ಅನುಸರಿಸಿದುದರ ವಿರುದ್ಧ 2.5 ಲಕ್ಷ ಗಿರಣಿ ಕಾರ್ಮಿಕರು 7-8 ತಿಂಗಳುಗಳಿಂದ ಮುಷ್ಕರ ನಿರತರಾಗಿದ್ದಾರೆ. ಸೆಣಬು, ಉಕ್ಕು ಟ್ರಾಕ್ಟರ್, ಟ್ರಕ್ಕು, ರಸಗೊಬ್ಬರ, ಸಕ್ಕರೆ, ಮತ್ತಿತರ ಕೈಗಾರಿಕಾ ಸಾಮಗ್ರಿಗಳಿಗೆ ಮಾರುಕಟ್ಟೆ ಇಲ್ಲದೆ ಆರ್ಥಿಕ ಹಿಂಜರಿತ ಸರ್ವವ್ಯಾಪಿಯಾಗುತ್ತಿದೆ. ಬ್ಯಾಂಕು ಸಾಲದ ಬಿಗಿ ನೀತಿಯಿಂದಾಗಿ ಸಮಸ್ಯೆ ಇನ್ನಷ್ಟೂ ಉಲ್ಬಣಗೊಂಡಿತು ಆರ್ಥಿಕ ಹಿಂಜರಿತ ಕಾಯಿಲೆ ಬ್ಯಾಂಕು ಸಾಲ ಸಡಿಲಿಕೆಯಿಂದ ಗುಣಪಡಿಸಲು ಸಾಧ್ಯವಿಲ್ಲ. ಆದುದರಿಂದ ಉತ್ಪಾದನೆಯಲ್ಲಿ ಕಡಿತ, ಕೆಲಸದಿಂದ ತೆಗೆದು ಹಾಕುವುದು, ವೇತನ ಸ್ಥಗಿತ, ಕಡಿತ, ಇತ್ಯಾದಿ ಹರಿತ ಪರಿಹಾರ ಕ್ರಮಗಳನೆಲ್ಲ ಕೈಗಾರಿಕೋದ್ಯಮಿಗಳೂ, ಅವರನ್ನು ಬೆಂಬಲಿಸುವ ಸರಕಾರವೂ ಕೈಗೊಳ್ಳುವುವು. ಇದರಿಂದ ತೀವ್ರ ಕಾರ್ಮಿಕ ಅಶಾಂತಿ ಉಂಟಾಗುವುದು. ಪುನಃ ದುಡಿಯುವ ಜನರ ಗ್ರಾಹಕ ಶಕ್ತಿ ಕುಸಿದು ಆಂತರಿಕ ಮಾರುಕಟ್ಟೆ ಇಲ್ಲದೆ ಸಮಸ್ಯೆ ಹೆಚ್ಚುವುದು. 1982ರ ಮೊದಲ ಅರ್ಧಾವಧಿಯಲ್ಲಿ ಕಾರ್ಮಿಕ ಅಶಾಂತಿ - ಮುಷ್ಕರ - ಲಾಕೌಟುಗಳಿಂದಾಗಿ 45 ಮಿಲಿಯ ದಿನಗಳಷ್ಟು ನಷ್ಟವಾಗಿದೆ. ಇದು 1979ರ ಗರಿಷ್ಠ ದಾಖಲೆಯನ್ನು ಮೀರಿಬಿಟ್ಟಿದೆ!

ಆರ್ಥಿಕ ಹಿಂಜರಿತ ಕೆಲವೇ ಕೈಗಾರಿಕೆಗಳಿಗೆ ಸೀಮಿತವಾಗಿದೆ ಎಂಬವಾದ ಸುಳ್ಳು. ಮಾರ್ಕ್ಸ್ ಒಂದುನೂರು ವರ್ಷಗಳ ಹಿಂದೆ ಹೇಳಿದಂತೆ, ಬಂಡವಾಳಶಾಹಿ ಪದ್ಧತಿಯಲ್ಲಿ ಒಂದು ಕೈಗಾರಿಕಾ ವಿಭಾಗದಲ್ಲಿ ಅಧಿಕ ಉತ್ಪಾದನೆ ಆದರೆ ಎಲ್ಲಾ ಕೈಗಾರಿಕಾ ವಿಭಾಗಗಳಿಗೂ ಅಧಿಕ ಉತ್ಪಾದನೆಯ ಸಮಸ್ಯೆ ಬರಲಿದೆ. ಕಾರಣ, ಒಂದಕ್ಕೊಂದು ಬೆಸೆದಿರುವ ಸಂಬಂಧ. ಒಂದರ ಉತ್ಪಾದನೆ, ಇನ್ನೊಂದರ ಕಚ್ಚಾ ಸಾಮಗ್ರಿ. 1982ರ ಪ್ರಾರಂಭದಲ್ಲಿ ಮೋಟಾರು ವಾಹನಗಳಿಗೆ ಮಾರುಕಟ್ಟೆ ಇಲ್ಲದೆ ಪ್ರಾರಂಭವಾದ ಆರ್ಥಿಕ ಹಿಂಜರಿತ ಈಗ ಸರ್ವವ್ಯಾಪಿಯಾಗಿದೆ. ಮೋಟಾರು ವಾಹನಗಳ ಬೇಡಿಕೆ ಕಡಿಮೆಯಾಗಿ, ಅವುಗಳ ಉತ್ಪಾದನೆ ಸ್ಥಗಿತಗೊಂಡಿತು, ಪರಿಣಾಮವಾಗಿ ಬಿಡಿಭಾಗಗಳ ಉತ್ಪಾದನೆ ಕುಸಿಯಿತು. ಈ ಕೈಗಾರಿಕೆಗೆ ಅಗತ್ಯವಾದ ಉಕ್ಕು ಸಾಮಗ್ರಿಗಳ ಬೇಡಿಕೆ ಕಡಿಮೆ ಆಯಿತು. ಕೈಗಾರಿಕೆ ಮತ್ತು ಆಹಾರ ಸಾಮಗ್ರಿಗಳ ಉತ್ಪಾದನೆಗಳು ಕಡಿಮೆಯಾಗಿ ರೈಲು ಹಾಗೂ ಮೋಟಾರು ಸಾರಿಗೆಗಳ ಕುಸಿತ. ಜಾಗತಿಕ ಪೈಪೋಟಿಯಿಂದ ಮೋಟಾರು ವಾಹನಗಳನ್ನಾಗಲೀ, ಉಕ್ಕು, ಸಕ್ಕರೆ, ಇತ್ಯಾದಿ ಅಧಿಕ ಉತ್ಪಾದನೆಯ ಸಾಮಗ್ರಿಗಳನ್ನಾಗಿ ಸಾಕಷ್ಟು ರಫ್ತು ಮಾಡಲೂ ಅವಕಾಶಗಳಿಲ್ಲ. ಪುನಃ ಮಾರುಕಟ್ಟೆ ಕುಸಿತ, ಆರ್ಥಿಕ ಹಿಂಜರಿತ. ಮೋಟಾರು ವಾಹನಗಳ ಮೇಲೆ – ಟ್ರಾಕ್ಟರ್ಸ್, ಟ್ರಕ್ಕುಗಳ ಮೇಲೆ ಅಧಿಕ ತೆರಿಗೆ ಹೇರಿರುವ ಕಾರಣ ಇವುಗಳ ಬೇಡಿಕೆಯಲ್ಲಿ ಕುಸಿತ. ರಸಗೊಬ್ಬರಗಳ ಬೆಲೆ ಏರಿಕೆಯಿಂದಾಗಿ ಅವುಗಳ ಬೇಡಿಕೆಯಲ್ಲಿ ಕುಸಿತ. ಪರಿಣಾಮವಾಗಿ ಅವುಗಳ ಸಾಗಣಿಕೆಗೆ ಬೇಕಾದ ಮೋಟಾರು ವಾಹನಗಳ ಬೇಡಿಕೆಯಲ್ಲಿ ಕುಸಿತ. ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಮಾರುಕಟ್ಟೆಯ ಕುಸಿತದಿಂದಾಗಿ ಗಿರಣಿ ಯಂತ್ರಗಳ, ರಾಸಾಯನಿಕ ಸಾಮಗ್ರಿಗಳ ಬೇಡಿಕೆಗಳಲ್ಲಿ ಕುಸಿತ. ಪುನಃ ವಾಣಿಜ್ಯ ಮೋಟಾರು ವಾಹನಗಳ ಬೇಡಿಕೆಯಲ್ಲಿ ಕುಸಿತ. ಯಂತ್ರ ಸಾಮಗ್ರಿಗಳ ಉತ್ಪಾದನೆಯಲ್ಲಿ ಕುಸಿತ, ಉಕ್ಕು ಬೇಡಿಕೆಯಲ್ಲಿ ಕುಸಿತ. ಹೀಗೆ ಇವು ವಿಷವರ್ತುಲಗಳು!

ಆರ್ಥಿಕ ಹಿಂಜರಿತ ದುಷ್ಪರಿಣಾಮಗಳನ್ನು ಸಣ್ಣ ಮತ್ತು ಮಧ್ಯಮ ಮಟ್ಟದ ಕೈಗಾರಿಕಾ ಸಂಸ್ಥೆಗಳು ತಾಳಲಾರದೆ ರೋಗಗ್ರಸ್ಥವಾಗಿ ದಿವಾಳಿಯಾದುವು. ಆದರೆ, ಬೃಹತ್ ಸಂಸ್ಥೆಗಳು ತಮ್ಮ ಉತ್ಪಾದನಾ ವೈವಿಧ್ಯತೆಗಳಿಂದ, ಮಾರುಕಟ್ಟೆಯ ಮೇಲಿನ ಏಕಸ್ವಾಮ್ಯದಿಂದ ಸರಕಾರದ ಸಾಮೀಪ್ಯದಿಂದ, ನವೀಕರಣ, ಕೇಂದ್ರೀಕರಣ, ಉತ್ಪಾದನೆಯಲ್ಲಿ ಕಡಿತ, ವಿದೇಶಿ ಮಾರುಕಟ್ಟೆಗಳಿಗೆ ರೋಗಗ್ರಸ್ಥ ಸಂಸ್ಥೆಗಳನ್ನು ವಶಪಡಿಸಿ ತಮ್ಮ ಏಕಸ್ವಾಮ್ಯತೆಯ ವಿಸ್ತರಣೆ, ಇತ್ಯಾದಿ ಉದ್ದೇಶಗಳನ್ನು ಸುಲಭವಾಗಿ ಈಡೇರಿಸಿಕೊಳ್ಳುವುವು. ಪರಿಣಾಮ, ಅಸಮಾನತೆ ಹೆಚ್ಚುವುದು.

ಆರ್ಥಿಕ ಹಿಂಜರಿತಕ್ಕೆ ಮುಖ್ಯ ಕಾರಣ-ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಭಾರತ ಸರಕಾರ ರೂ. 5000 ಕೋಟಿ ಸಾಲ ಪಡೆದಿರುವುದು, ಆ ಸಂಸ್ಥೆಯು ತನ್ನ ಶರತ್ತುಗಳನ್ನು ಸರಕಾರದ ಮೇಲೆ ಹೇರುತ್ತಿರುವುದು. ಪರಿಣಾಮವಾಗಿ ವಿದೇಶಿ ಸಾಲ ಭಾರ ರೂ. 15800 ಕೋಟಿಗೂ ಜೂನ್ 1982ರಷ್ಟರಲ್ಲಿ ಮೀರಿದೆ. ದುಃಸ್ಥಿತಿಯನ್ನು ಎದುರಿಸಲು ಇನ್ನಷ್ಟೂ ವಿದೇಶಿ ಸಾಲವನ್ನೇ ಅವಲಂಬಿಸಬೇಕಾ

(6ನೇ ಪುಟ ನೋಡಿ)

ಕೇಂದ್ರ ಸಮಿತಿಯ ಸಭೆಯ ಪ್ರಕಟನೆ

ಹೋರಾಟಗಳನ್ನು ತೀವ್ರಗೊಳಿಸಿ

(ಕಳೆದ ಸಂಚಿಕೆಯಿಂದ ಮುಂದುವರಿದದು)

ಸರ್ವಾಧಿಕಾರೀ ಕ್ರಮಗಳು

ಆರ್ಥಿಕ ಸಂಕಷ್ಟಗಳಿಂದಾಗಿ ಜನತೆಯ ನಡುವೆ ಬೆಳೆಯುತೊಡಗಿರುವ ಅತೃಪ್ತಿಯನ್ನು ಕಾಂಗ್ರೆಸ್ (ಐ) ಆಡಳಿತಗಾರರು ತಮ್ಮ ಅಧಿಕಾರಶಾಹೀ ಕ್ರಮಗಳ ಮೂಲಕ ದಮನ ಮಾಡಲು ಹೊರಟಿದ್ದಾರೆ. ಅವರ ಹಕ್ಕುಗಳನ್ನು ಕಸಿಯತೊಡಗಿದ್ದಾರೆ. ಪಾರ್ಲಿಮೆಂಟು ತನ್ನ ಮಳೆಗಾಲದ ಅಧಿವೇಶನದಲ್ಲಿ ಮೊದಲೇ ಸೂಚಿಸಲಾಗಿದ್ದ ನಾಲ್ಕು ಕಾರ್ಮಿಕ ವಿರೋಧೀ ಕಾಯಿದೆಗಳಲ್ಲಿ ಎರಡನ್ನು ಅಂಗೀಕರಿಸಿಬಿಟ್ಟಿದೆ. ತಿದ್ದುಪಡಿಮಾಡಿದ ಕಾರ್ಮಿಕ ವಿವಾದಗಳ ಕಾಯಿದೆಯು ಕಾರ್ಮಿಕ ವರ್ಗವು ದೀರ್ಘ ಹೋರಾಟಗಳ ಫಲವಾಗಿ ಪಡೆದಿರುವ ಸಂಘಟನಾ ಹಕ್ಕು, ಸಾಮೂಹಿಕ ಚೌಕಾಶಿಯ ಹಕ್ಕು ಎಲ್ಲಕ್ಕಿಂತ ಮುಖ್ಯವಾಗಿ ಮುಷ್ಕರದ ಹಕ್ಕುಗಳನ್ನು ಕಸಿದುಕೊಂಡಿದೆ. ಕೇಂದ್ರ ಸರ್ಕಾರವು ಖಾಸಗಿ ವಾಣಿಜ್ಯ ಸಂಸ್ಥೆಗಳ ಬ್ಯೂರೋದ ಮೂಲಕ ಸಾರ್ವಜನಿಕ ಕ್ಷೇತ್ರಗಳ ವೇತನ ಮತ್ತು ಆದಾಯದ ಮೇಲೆ ನಿಯಂತ್ರಣ ಹೇರ ತೊಡಗಿರುವುದು ಸಾರ್ವಜನಿಕ ಉದ್ಯಮಗಳು ಕ್ರಮೇಣ ಖಾಸಗಿ ಬಂಡವಾಳಗಾರರ ಹಿಡಿತಕ್ಕೆ ಒಳಗಾಗಲು ಅನುವು ಮಾಡಿಕೊಡುತ್ತದೆ. ಕಾರ್ಮಿಕರ ಹಾಗೂ ಇತರ ವಿಭಾಗಗಳ ಹೋರಾಟಗಳನ್ನು ಬಗ್ಗುಬಡಿಯಲು ಅಮಾನುಷವಾಗಿ ಪೋಲೀಸ್ ಶಕ್ತಿಯನ್ನು ಬಳಸಲಾಗುತ್ತಿದೆ. ರಾಷ್ಟ್ರೀಯ ಭದ್ರತಾ ಕಾಯಿದೆ, ಅಗತ್ಯ ಸೇವಾ ಸಂರಕ್ಷಣಾ ಕಾಯಿದೆಗಳು ಕಾರ್ಯೋನ್ಮುಖಗೊಂಡಿವೆ.

ಸರ್ಕಾರದ ಈ ಎಲ್ಲ ಧಾಳಿಗಳನ್ನು ಎದುರಿಸಿ ಹೋರಾಟ ನಡೆಸುತ್ತಿರುವ ದುಡಿಯುವ ಜನತೆಯನ್ನು-ಶಿಕ್ಷಕರು, ವೈದ್ಯರು, ಎಂಜಿನಿಯರುಗಳು, ಮಧ್ಯಮ ವರ್ಗದ ನೌಕರರು, ಇವರೆಲ್ಲರನ್ನು ಕೇಂದ್ರ ಸಮಿತಿಯು ಅಭಿನಂದಿಸುತ್ತದೆ. ಬಿ. ಹೆಚ್. ಇ. ಎಲ್. ಮತ್ತು ಉಕ್ಕು-ಕಲ್ಲಿದ್ದಲು ಉದ್ಯಮಗಳ ಕಾರ್ಮಿಕರನ್ನು ಒಂದುಗೂಡಿಸಿ ಯಶಸ್ವಿಯಾಗಿ ಐಕ್ಯ ಸಮಾವೇಶವೊಂದನ್ನು ಸಂಘಟಿಸಿದ ಮತ್ತು ಎಲ್ಲಾ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಮಾವೇಶಕ್ಕೆ ಸಿದ್ಧತೆ ನಡೆಸುತ್ತಿರುವ ಕಾರ್ಮಿಕ ಸಂಘಗಳ ರಾಷ್ಟ್ರೀಯ ಪ್ರಚಾರ ಸಮಿತಿಯನ್ನು ಕೇಂದ್ರ ಸಮಿತಿಯು ವಿಶೇಷವಾಗಿ ಅಭಿನಂದಿಸುತ್ತದೆ.

ಹೋರಾಟದ ಹಾದಿಯಲ್ಲಿ ಮಹಿಳೆಯರು

ದೇಶದ ಮಹಿಳಾ ಸಮೂಹದ ನಡುವೆ ಅವರಲ್ಲಡಗಿದ್ದ ಅತೃಪ್ತಿ ಹಿಂದೆಂದೂ ಕಂಡಿರದ ರೀತಿಯಲ್ಲಿ ವ್ಯಾಪಕವಾಗಿ ಸ್ಫೋಟಿಸಿದೆ, ಅದರಲ್ಲೂ ಮುಖ್ಯವಾಗಿ ಉತ್ತರದ ರಾಜ್ಯಗಳಲ್ಲಿ. ಮನೆಯೊಳಗಿನ ಅವರದೇ ಪುಟ್ಟ ಪ್ರಪಂಚದಲ್ಲಿ ಜೀವಿಸುತ್ತಿದ್ದ ಸ್ತ್ರೀ ಸಮೂಹ, ವರದಕ್ಷಿಣೆ, ವಧು ದಹನ, ಅತ್ಯಾಚಾರ, ಹಾಗೂ ಮತ್ತಿತರ ಕ್ರೌರ್ಯಗಳ ವಿರುದ್ಧ ಸಿಡಿದೆದ್ದು ಬೀದಿಗಿಳಿದು ಪ್ರತಿಭಟಿಸತೊಡಗಿದ್ದಾರೆ. ಕೊಂಚ ಮುಂದುವರಿದ ವಿಭಾಗ ಇನ್ನೂ ಒಂದು ಹೆಜ್ಜೆ ಮುಂದುವರಿದು, ಸಮಾನವೇತನ, ಹೆಚ್ಚು ಉದ್ಯೋಗಾವಕಾಶ, ಅಸಮಾನತೆ ಇವುಗಳ ಕುರಿತಾಗಿ ಚಳುವಳಿಗಳನ್ನು ಸಂಘಟಿಸತೊಡಗಿದ್ದಾರೆ. ಮಹಿಳೆಯರಲ್ಲಿ ಉಂಟಾಗಿರುವ ಈ ಹೊಸ ಜಾಗೃತಿ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಈ ಹೋಟಗಳನ್ನು ಸಂಘಟಿಸುತ್ತಿರುವ ಮುಂಚೂಣಿಯಲ್ಲಿರುವ ಮಹಿಳಾ ಸಂಘಟನೆಗಳನ್ನು ಕೇಂದ್ರ ಸಮಿತಿಯು ಅಭಿನಂದಿಸುತ್ತದೆ. ಹಾಗೂ ತನ್ನ ಬೆಂಬಲವನ್ನು ವ್ಯಕ್ತಪಡಿಸುತ್ತದೆ

ಜನತೆಯಲ್ಲಿ ಹರಡಿರುವ ಅತೃಪ್ತಿ ಪೋಲೀಸ್ ಪಡೆಗಳಿಗೂ ವ್ಯಾಪಿಸಿರುವುದನ್ನು ಕೇಂದ್ರ ಸಮಿತಿ ಗುರುತಿಸಿದೆ. ಮಹಾರಾಷ್ಟ್ರ ಮತ್ತು ಹರ್ಯಾಣಗಳಲ್ಲಿ ಪೋಲೀಸರೇ ಮುಷ್ಕರಕ್ಕಿಳಿದಿದ್ದಾರೆ. ಮಹಾರಾಷ್ಟ್ರದ ಕೇಂದ್ರ ಸಮಿತಿ ಸದಸ್ಯರು ಮುಂಬೈ ನಗರದಲ್ಲಿ ಎರಡು ದಿನಗಳ ಕಾಲ ನಡೆದ ಪೋಲೀಸ್ ದಂಗೆಯನ್ನು ವರ್ಣಿಸಿದ್ದಾರೆ. ಪೋಲೀಸರ ಮತ್ತವರ ಕುಟುಂಬಗಳವರ ಮನಸ್ಥಿತಿ, ಕಾರ್ಮಿಕ ವರ್ಗ ಅವರಿಗೆ ನೀಡಿದ ಬೆಂಬಲ, ಮುಖ್ಯವಾಗಿ ಮುಷ್ಕರನಿರತ ಹತ್ತಿ ಗಿರಣಿ ಕಾರ್ಮಿಕರು ನೀಡಿದ ಬೆಂಬಲ, ಜನಸಾಮಾನ್ಯರು ನೀಡಿದ ಸೌಹಾರ್ದ ನೆರವು ಇವುಗಳೆಲ್ಲಾ 1946ರ ರಿನ್ ದಂಗೆಯನ್ನು ನೆನಪಿಗೆ ತರುತ್ತಿದ್ದವು. ಸರ್ಕಾರ ಸೈನ್ಯ, ಕೇಂದ್ರ ಮೀಸಲು ಪಡೆ, ಗಡಿ ಭದ್ರತಾ ಪಡೆಗಳನ್ನು ಉಪಯೋಗಿಸಿ ಪೋಲೀಸರ ಈ ಮುಷ್ಕರವನ್ನು ತೀವ್ರವಾಗಿ ಹತ್ತಿಕ್ಕಿತು. ಕೇಂದ್ರ ಸಮಿತಿಯು ಸರ್ಕಾರದ ಈ ಕ್ರಮವನ್ನು ಖಂಡಿಸಿ, ಪೋಲೀಸರ ಬೇಡಿಕೆಗಳಿಗೆ ತನ್ನ ಬೆಂಬಲ ವ್ಯಕ್ತಪಡಿಸಿ, ಬೇಡಿಕೆಗಳನ್ನು ಈಡೇರಿಸದೇ ಹೋದರೆ ಭವಿಷ್ಯದಲ್ಲಿ ಇನ್ನೂ ತೀವ್ರವಾದ ಆಸ್ಫೋಟನೆ ಉಂಟಾಗುತ್ತದೆಂದು ಸರಕಾರವನ್ನು ಎಚ್ಚರಿಸಿದೆ. ಪೋಲೀಸರಿಗೆ ಬೆಂಬಲ ಸೂಚಿಸಿ ಮುಂಬೈ ಬಂದ್ ಅನ್ನು ಸಂಘಟಿಸಿದ ವಿರೋಧ ಪಕ್ಷಗಳನ್ನೂ, ಕಾರ್ಮಿಕ ಸಂಘಗಳನ್ನು ಮತ್ತು ಸಾಮೂಹಿಕ ಸಂಘಟನೆಗಳನ್ನೂ ಕೇಂದ್ರ ಸಮಿತಿಯು ಅಭಿನಂದಿಸಿದೆ.

ಕಾಂಗ್ರೆಸ್ (ಐ) ಆಡಳಿತದ ರಾಜ್ಯಗಳಲ್ಲಿನ ಭ್ರಷ್ಟಾಚಾರ, ಮುರಿದುಬಿದ್ದಿರುವ ಕಾನೂನು ಮತ್ತು ಶಿಸ್ತು ಪರಿಪಾಲನೆ, ಹರಿಜನರ ಮತ್ತು ಕೃಷಿ ಕೂಲಿಗಾರರ ಮೇಲೆ ಆಗುತ್ತಿರುವ ಆಕ್ರಮಣ, ಮಹಿಳೆಯರ ಮೇಲಿನ ದೌರ್ಜನ್ಯಗಳು ಈ ಎಲ್ಲ ಪರಿಸ್ಥಿತಿಗಳ ಕುರಿತು ಆ ರಾಜ್ಯಗಳಲ್ಲಿನ ಕೇಂದ್ರ ಸಮಿತಿ ಸದಸ್ಯರು ವರದಿ ಮಾಡಿದ್ದಾರೆ.

ಪತ್ರಿಕಾ ಸ್ವಾತಂತ್ರ್ಯವನ್ನು ಹೊಸಕಿಹಾಕಲುದ್ದೇಶಿಸಿ ರೂಪಿಸಲ್ಪಟ್ಟ ಬಿಹಾರದ ಪತ್ರಿಕಾ ಮಸೂದೆಯ ಹಿಂದಿನ ಉದ್ದೇಶ ಆ ರಾಜ್ಯದಲ್ಲಾಗುತ್ತಿರುವ ದೌರ್ಜನ್ಯಗಳ ಕುರಿತಾದ ವರದಿ, ಭ್ರಷ್ಟಾಚಾರ, ಅಕ್ರಮಗಳ ಕುರಿತಾದ ವರದಿ, ಸರ್ಕಾರದ ದುರಾಡಳಿತದ ಬಗ್ಗೆ ಪತ್ರಿಕೆಗಳಲ್ಲಿ ಬರುವ ವರದಿಗಳನ್ನು ತಡೆಹಿಡಿಯುವುದೇ ಆಗಿದೆ. ಬಿಹಾರದ ನಮ್ಮ ಕೇಂದ್ರ ಸಮಿತಿ ಸದಸ್ಯರು ಜಗನ್ನಾಥ್ ಮಿಶ್ರಾ ಮಂತ್ರಿ ಮಂಡಲದ ಭ್ರಷ್ಟಾಚಾರದ ಕುರಿತು, 'ತೀವ್ರಗಾಮಿ'ಗಳ ಹೆಸರಿನಲ್ಲಿ ಹರಿಜನರ ಮತ್ತು ಕೃಷಿ ಕೂಲಿಗಾರರ ಗಣನೀಯ ಪ್ರಮಾಣದ ಕೊಲೆಗಳನ್ನು ನಡೆಸುತ್ತಿರುವ ಭೂಮಾಲೀಕರಿಗೆ ಕುಮ್ಮಕ್ಕು ಕೊಡುತ್ತಿರುವ ಆಳುವ ವರ್ಗದ ರಾಜಕಾರಣಿಗಳನ್ನು ಕುರಿತು ವಿವರಗಳನ್ನು ನೀಡಿದ್ದಾರೆ. ಅನೇಕ ವಿಷಯಗಳನ್ನು ಕುರಿತಂತೆ ಸುಪ್ರೀಂ ಕೋರ್ಟ್ ಈ ರಾಜ್ಯವನ್ನು ಮತ್ತೆ ಮತ್ತೆ ಖಂಡನೆಗೆ ಗುರಿಪಡಿಸಿದೆ.

ಪತ್ರಿಕಾ ಮಸೂದೆಗೆ ವಿರೋಧ

ಪತ್ರಿಕಾ ಮಸೂದೆಯ ಕ್ರೂರತೆಯ ವಿರುದ್ಧ ರಾಷ್ಟ್ರೀಯ ಮಟ್ಟದಲ್ಲಿ ನಡೆದ ಚಳುವಳಿ ಕುರಿತು ಕೇಂದ್ರ ಸಮಿತಿ ತನ್ನ ತೃಪ್ತಿಯನ್ನು ವ್ಯಕ್ತಪಡಿಸಿದೆ. ಕೇಂದ್ರ ಸಮಿತಿಯು ಪತ್ರಕರ್ತರನ್ನೂ, ಅವರ ಸಂಘಟನೆಗಳನ್ನೂ, ವಿರೋಧ ಪಕ್ಷಗಳು ಸಾಮೂಹಿಕ ಸಂಘಟನೆಗಳು ಮತ್ತು ಎಲ್ಲಾ ಪ್ರಜಾಪ್ರಭುತ್ವ ಮನೋಭಾವದ ಜನರನ್ನು ಪತ್ರಿಕಾ ಮಸೂದೆಯ ವಿರುದ್ಧ ಚಳುವಳಿ ಸಂಘಟಿಸಿ ಅದನ್ನು ಬಿಹಾರಕ್ಕಷ್ಟೇ ಸೀಮಿತಗೊಳಿಸದೆ ಅಖಿಲ ಭಾರತ ಮಟ್ಟದಲ್ಲಿ ನಡೆಸಿದ್ದಕ್ಕಾಗಿ ತನ್ನ ಅಭಿನಂದನೆ ಸಲ್ಲಿಸಿದೆ. ಸರ್ವಾಧಿಕಾರೀ ಕ್ರಮಗಳಿಗೆದುರಾಗಿ ನಡೆದ ಹೋರಾಟಗಳಲ್ಲೆಲ್ಲಾ ಇದು ಅತ್ಯಂತ ಮಹತ್ವಪೂರ್ಣವಾದುದಾಗಿದೆ. ಆಗಸ್ಟ್ 21 ರಂದು ಪಾಟ್ನಾದಲ್ಲಿ ಪತ್ರಕರ್ತರ ಮೇಲೆ ನಡೆದ ಪೂರ್ವನಿಯೋಜಿತ ಲಾಠಿ ಚಾರ್ಜನ್ನು ಮತ್ತು ನಂತರದ ದಿನಗಳಲ್ಲಿ ಇದನ್ನು ಪ್ರತಿಭಟಿಸಿದ ಇತರ ವಿಭಾಗಗಳ ಜನರ ಮೇಲೆ ನಡೆದ ಪೋಲೀಸ್ ಧಾಳಿಯನ್ನು ಕೇಂದ್ರ ಸಮಿತಿ ಖಂಡಿಸಿದೆ. ಕೇಂದ್ರ ಸಮಿತಿಯು ಈ ಕರಾಳ ಮಸೂದೆಯನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದೆ. ಮತ್ತು ಈ ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಪ್ರಬಲವಾದ ಹೋರಾಟ ನಡೆಸಬೇಕೆಂದು ಕೇಂದ್ರ ಸಮಿತಿಯು ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಕರೆ ನೀಡಿದೆ. ಇದರ ವಿರುದ್ಧ ಈಗಲೇ ಹೋರಾಟ ನಡೆಸದಿದ್ದರೆ ಇಂತಹುವುದೇ ಮಾದರಿಯ ಕ್ರಮಗಳನ್ನು ಇತರ ಕಾಂಗ್ರೆ ಆಡಳಿತವಿರುವ ರಾಜ್ಯಗಳಲ್ಲೂ ಕೈಗೊಳ್ಳಬಹುದಾದ ಅಪಾಯವಿದೆಯೆಂದು ಜನತೆಯನ್ನು ಎಚ್ಚರಿಸಿದೆ. ಈ ಸಂಬಂಧವಾಗಿ ಸೆಪ್ಟೆಂಬರ್ 3 ರಂದು ನಡೆದ ಪತ್ರಿಕೋದ್ಯೋಗಿಗಳ ಮುಷ್ಕರಕ್ಕೆ ಪಕ್ಷವು ಸಂಪೂರ್ಣ ಬೆಂಬಲ ನೀಡಿಯೆಂದು ಕೇಂದ್ರ ಸಮಿತಿ ತಿಳಿಸಿತ್ತು.

ಇತ್ತೀಚಿನ ದಿನಗಳಲ್ಲಿ ಪ್ರತ್ಯೇಕತಾವಾದಿ ಹಾಗೂ ವಿಚ್ಛಿದ್ರಕಾರೀ ಶಕ್ತಿಗಳು ಚುರುಕಾಗಿರುವುದರಿಂದ ಕೇಂದ್ರ ಸಮಿತಿ ತನ್ನ ಕಳವಳ ವ್ಯಕ್ತಪಡಿಸಿದೆ. ಅಸ್ಸಾಂನಲ್ಲಿ ಕಳೆದ ಮೂರು ವರ್ಷಗಳಿಂದಲೂ ಚಳವಳಿ ನಡೆಯುತ್ತಿದೆ. ಚಳುವಳಿಗಾರರು ಈ ಸಲದ ಆಗಸ್ಟ್ 15ರಂದು ರಾಜ್ಯದಲ್ಲಿ 'ಜನತಾ ಕರ್ಫ್ಯೂ' ವನ್ನು ಹೇರುವುದರ ಮೂಲಕ ಆಚರಿಸಿದರು. ಇತರ ಈಶಾನ್ಯ ರಾಜ್ಯಗಳಲ್ಲಿ ಬಂಡಾಯಗಳು ಮುಂದುವರಿಯುತ್ತಿವೆ, ಇದರ ಪ್ರತಿಯೊಂದು ಪ್ರಯತ್ನವೂ ತ್ರಿಪುರಾ ಸರ್ಕಾರವನ್ನು ಉರುಳಿಸುವ ಸಂಚಾಗಿದೆ. ಅಸ್ಸಾಂ ಬಗ್ಗೆ ನಡೆದ ತ್ರಿಪಕ್ಷೀಯ ಮಾತುಕತೆಗಳ ಕುರಿತು ಚರ್ಚಿಸುತ್ತಾ, "ವಿದೇಶೀಯರ" ಸಮಸ್ಯೆಗೆ ಪ್ರಜಾಸತ್ತಾತ್ಮಕ ಪರಿಹಾರ ಕಂಡು ಹಿಡಿಯುವ ಮೂಲಕ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವಂತಹ ವಾತಾವಾರಣದಲ್ಲಿ ರಾಜ್ಯದಲ್ಲಿ ಚುನಾವಣೆ ನಡೆಯಬೇಕೆಂಬ ತನ್ನ ನಿಲುವನ್ನು ಪುನಃ ಸ್ಪಷ್ಟಪಡಿಸಿದೆ

ಪಂಜಾಬ್‌ನ ಪರಿಸ್ಥಿತಿ

ಕೇಂದ್ರ ಸಮಿತಿಯ ಅಧಿವೇಶನ ನಡೆಯುತ್ತಿದ್ದ ಸಂದರ್ಭದಲ್ಲೇ ಅಕಾಲಿ ನಾಯಕರ ಹಾಗೂ ಕಾರ್ಯಕರ್ತರ ಬಂಧನದ ವರದಿ ತಿಳಿದು ಬಂದಿತು. ಹದಿನೈದು ದಿವಸಗಳ ಅವಧಿಯಲ್ಲಿ ನಡೆದ ಎರಡು ವಿಮಾನಾಪಹರಣಗಳು, ಮುಖ್ಯ ಮಂತ್ರಿಯ ಕೊಲೆ ಪ್ರಯತ್ನ ಮುಂತಾದವುಗಳಿಂದ ಪಂಜಾಬ್ ತೀರಾ ಅಪಾಯಕಾರೀ ಸ್ಥಿತಿಯಲ್ಲಿದೆ. 'ಘರ್ಷಣೆಗಳಲ್ಲಿ ಸತ್ತ'ವರ ವರದಿಗಳ ನಿಜಾಂಶ ಪೋಲೀಸ್ ಕಸ್ಟಡಿಗಳಲ್ಲಿ ಬಂಧಿತರ ಸಾವು ಎಂಬುದು ಜನರಿಗೆ ತಿಳಿಯುವ ಮೂಲಕ ಸರ್ಕಾರವೂ ಕೂಡ ಉರಿಯುವ ಬೆಂಕಿಗೆ ಎಣ್ಣೆ ಸುರಿಯುವ ಕೆಲಸ ಮಾಡುತ್ತದೆ. ಇವುಗಳ ಶಕ್ತಿಯನ್ನು ಹೆಚ್ಚಿಸಿ, ಸಿಕ್ ಜನಾಂಗವನ್ನು, 'ಪಂಥವನ್ನು ರಕ್ಷಿಸಿ' ಎಂಬ ಘೋಷಣೆ ಕೊಟ್ಟು ಉದ್ರೇಕಿಸುತ್ತದೆ. ಅಕಾಲಿಗಳ ಬಂಧನ ಅವರ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಬಂಧಿತರಾಗಿರುವ ಎಲ್ಲಾ ಅಕಾಲಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸುತ್ತದೆ. ಮತ್ತು ಛಿದ್ರಕಾರೀ ಶಕ್ತಿಗಳನ್ನು ಯಶಸ್ವಿಯಾಗಿ ಎದುರಿಸಲು ಎಲ್ಲ ಪಕ್ಷಗಳ ಸಭೆಯೊಂದನ್ನು ಕರೆಯಬೇಕೆಂದು ಕೇಂದ್ರ ಸಮಿತಿಯು ಸರ್ಕಾರಕ್ಕೆ ಸೂಚಿಸಿದೆ. ಕೆಲವು ಬೇಡಿಕೆಗಳ ಕುರಿತಾಗಿ ಸರ್ಕಾರವೂ ಕೂಡ ವಿಳಂಬ ಮಾಡದೆ ತೀರ್ಮಾನಗಳನ್ನು ಜ್ಯಾರಿಗೊಳಿಸಬೇಕು. ಉದಾಹರಣೆಗೆ ಚಂಡೀಘರ ಮತ್ತು ಸುತ್ತಮುತ್ತಲಿನ ಪಂಜಾಬೀ ಮಾತನಾಡುವ ಪ್ರದೇಶಗಳನ್ನು ಪಂಜಾಬಿನಲ್ಲಿ ಗ್ರಾಮವು ಒಂದು ಘಟಕ ಎನ್ನುವ ಆಧಾರದ ಮೇಲೆ ಸೇರಿಸಿಕೊಳ್ಳುವುದು, ಮತ್ತು ನದೀ ನೀರಿನ ವಿವಾದವನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಶಿಫಾರಸ್ಸಿಗೆ ಬಿಡುವುದು ಇತ್ಯಾದಿ. ಸರ್ಕಾರವು ಕೂಡಲೇ ಅಖಿಲ ಭಾರತ ಸಿಖ್ ಗುರು ದ್ವಾರ ಕಾಯಿದೆಯನ್ನು ಕಾರ್ಯರೂಪಕ್ಕೆ ತಂದು, ಗುರುದ್ವಾರದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯಲ್ಲಿ ಉಂಟಾಗುವ ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಬೇಕು. ಸಿಖ್ ಉಗ್ರಗಾಮಿಗಳನ್ನು ಹಾಗೂ ಹಿಂದೂ ಜಾತೀವಾದಿಗಳನ್ನು ಸೋಲಿಸಿ ರಾಜ್ಯದ ಜನರ ಒಗ್ಗಟ್ಟನ್ನು ಕಾಪಾಡಲು ಮತ್ತು ಶಾಂತಿಯನ್ನು ನೆಲೆಗೊಳಿಸಲು ಚಳುವಳಿಯನ್ನು ಸಂಘಟಿಸಿ ಅದನ್ನು ಪ್ರಬಲಗೊಳಿಸಿದ್ದಕ್ಕಾಗಿ ಕೇಂದ್ರ ಸಮಿತಿಯು ಪಕ್ಷದ ಪಂಜಾಬ್ ಘಟಕವನ್ನು ಅಭಿನಂದಿಸಿದೆ.

ಜಮ್ಮು ಮತ್ತು ಕಾಶ್ಮೀರಗಳ ಪರಿಸ್ಥಿತಿ ಕೂಡ ವಿಷಮಿಸಿರುವುದನ್ನು ಕೇಂದ್ರ ಸಮಿತಿಯು ಗುರುತಿಸಿದೆ. ಒಂದು ಕಡೆ ಜಮಾತೆ-ಇಸ್ಲಾಮಿ ಮತ್ತೊಂದು ಕಡೆ ಆರ್.ಎಸ್.ಎಸ್., ಬಿ.ಜೆ.ಪಿ., ವಿಶ್ವ ಹಿಂದೂ ಪರಿಷತ್‌ಗಳು ಜಾತೀಯ ವಿಷ ಬೀಜಗಳನ್ನು ಬಿತ್ತುತ್ತಿವೆ. ಇಸ್ಲಾಮಿಕ್ ಮೂಲಭೂತವಾದಿಗಳು ಈಗಾಗಲೇ ಸ್ವತಂತ್ರ ಕಾಶ್ಮೀರದ ಘೋಷಣೆಗಳನ್ನು ಉಚ್ಚರಿಸುತ್ತಿದ್ದಾರೆ. ಸಣ್ಣ ಶಕ್ತಿಯಾಗಿದ್ದರೂ ಕೂಡ ಧೈರ್ಯದಿಂದ ವಿಚ್ಛಿದ್ರಕಾರೀ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಧೈರ್ಯದಿಂದ ಹೋರಾಟ ನಡೆಸುತ್ತಿರುವ ಪಕ್ಷದ ಜಮ್ಮು ಮತ್ತು ಕಾಶ್ಮೀರದ ಘಟಕವನ್ನು ಅಭಿನಂದಿಸಿದೆ.

ಛಿದ್ರಕಾರೀ ಶಕ್ತಿಗಳ ಕುರಿತಾಗಿ ಚರ್ಚೆ ನಡೆಯುತ್ತಿದ್ದ ಸಂಧರ್ಭದಲ್ಲಿ ತಮಿಳುನಾಡಿನ ಸದಸ್ಯರು ಇತ್ತೀಚೆಗೆ ಕನ್ಯಾಕುಮಾರಿ, ಪುಳಿಯಾಂಗುಡಿ ಮತ್ತು ರಾಜ್ಯದ ಇನ್ನಿತರ ಭಾಗಗಳಲ್ಲಿ ಹಿಂದೂ ಕೋಮುವಾದಿಗಳಿಂದ ಪ್ರೇರೇಪಿಸಲ್ಪಟ್ಟ ಘಟನೆಗಳನ್ನು ಕುರಿತು ವಿವರಿಸಿದರು. ಅದೇ ಸಮಯದಲ್ಲೇ ರಾಜ್ಯದಲ್ಲಿ ಇಸ್ಲಾಂ ಮೂಲಭೂತವಾದಿಗಳೂ ಕೂಡ ಚುರುಕಾಗುತ್ತಿದ್ದಾರೆ. ಮುಸ್ಲಿಂ ಲೀಗಿನ ಸಂಸತ್ ಸದಸ್ಯರೊಬ್ಬರು "ಮುಸ್ಲಿಮರನ್ನು ಒಂದುಗೂಡಿಸುವುದು ಅವರು ನೆಲೆಸುವ ದೇಶವಲ್ಲ; ಅದರೆ ಅವರ ಧರ್ಮ' ಎಂದು ಬರೆದಿದ್ದಾರೆ. ಮುಸ್ಲಿಂ ಲೀಗ್ ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಕಾಂಗ್ರೆಸ್ (ಐ)ನ ಮಿತ್ರ ಪಕ್ಷವಾಗಿದೆ.

(6ನೇ ಪುಟ ನೋಡಿ)

ಹೋರಾಟಗಳನ್ನು ತೀವ್ರಗೊಳಿಸಿ

(೨ನೇ ಪುಟದಿಂದ)

ಸಿ. ಪಿ. ಐ. (ಎಂ) ಮೊದಲೇ ತಿಳಿಸಿರುವಂತೆ ಕಾಂಗ್ರೆಸ್ (ಐ)ನ ಧೋರಣೆಗಳು ಸಮಸ್ಯೆಗಳನ್ನು ಸೃಷ್ಟಿಸಿ ಪ್ರತ್ಯೇಕತಾವಾದಿ ಮತ್ತು ಛಿದ್ರಕಾರೀ ಶಕ್ತಿಗಳಿಗೆ ಅನುಕೂಲಕರವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಹಾಳು ಮಾಡುವ ದೃಷ್ಟಿಯಿಂದ ಸಾಮ್ರಾಜ್ಯಶಾಹಿಗಳು ಈ ಶಕ್ತಿಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿರುವಾಗಲೇ ಸರ್ಕಾರ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸಮಿತಿಯು ಕೇಂದ್ರ ಸಮಾಚಾರ ಹಾಗೂ ಪ್ರಸಾರ ಖಾತೆಯು ದೂರದರ್ಶನದ ಪ್ರಾದೇಶಿಕ ಕೇಂದ್ರಗಳಲ್ಲಿ 'ರಾಷ್ಟ್ರೀಯ ಕಾರ್ಯಕ್ರಮಗಳ ಹೆಸರಿನಲ್ಲಿ ದಿನವಹಿ ಟೆಲಿಕ್ಯಾಸ್ಟ್ (Telecast) ಹೇರುವುದಕ್ಕೆ ಕೇಂದ್ರ ಸಮಿತಿ ತನ್ನ ಅಸಮ್ಮತಿ ಸೂಚಿಸಿದೆ. ಕೇಂದ್ರ ಸಮಿತಿಯು ಸರ್ಕಾರದ ಈ ಕ್ರಮ ದೇಶದ ಸಮಗ್ರತೆಯ ದೃಷ್ಟಿಯಿಂದ ಹಿತಕರವಲ್ಲವೆಂಬ ಅಭಿಪ್ರಾಯವನ್ನು ಹೊಂದಿದೆ. ಮತ್ತು ಇದನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದೆ.

ಕೇಂದ್ರ ಸಮಿತಿಯು ತ್ರಿಪುರಾದ ಪರಿಸ್ಥಿತಿಯನ್ನು ಚರ್ಚಿಸಿ ಡಿಸೆಂಬರ್ 19 ರಂದು ರಾಜ್ಯದಲ್ಲಿ ವಿಧಾನ ಸಭಾ ಚುನಾವಣೆಗಳನ್ನು ನಡೆಸಬೇಕೆಂಬ ಅಲ್ಲಿನ ಸರ್ಕಾರದ ತೀರ್ಮಾನವನ್ನು ಬೆಂಬಲಿಸಿದೆ.

ಕಳೆದ ಏಳು ತಿಂಗಳ ಅವಧಿಯಲ್ಲುಂಟಾದ ಬೆಳವಣಿಗೆಗಳನ್ನು ವಿಮರ್ಶಿಸಿ ಅಧಿಕಾರಶಾಹಿಯು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ, ಪಾರ್ಲಿಮೆಂಟರೀ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಆಕ್ರಮಣಗಳು ನಡೆಯುತ್ತಿರುವ ಸಮಯದಲ್ಲೇ ಈ ಶಕ್ತಿಗಳನ್ನು ವಿರೋಧಿಸುವ ಪ್ರತಿಶಕ್ತಿಗಳೂ ಬೆಳೆಯುತ್ತಿವೆಯೆಂಬ ತೀರ್ಮಾನಕ್ಕೆ ಕೇಂದ್ರ ಸಮಿತಿ ಬಂದಿದೆ.

ಪಾರ್ಲಿಮೆಂಟಿನ ಒಳಗಿನ ಮತ್ತು ಹೊರಗಿನ ವಿರೋಧ ಪಕ್ಷಗಳು, ಕೇಂದ್ರ ಕಾರ್ಮಿಕ ಸಂಘಟನೆಗಳು, ಮಧ್ಯಮ ವರ್ಗದ ನೌಕರರ ಫೆಡರೇಷನ್ನುಗಳು, ವಿದ್ಯಾರ್ಥಿಗಳ, ಯುವಜನರ, ಮಹಿಳೆಯರ, ಸಾಮೂಹಿಕ ಸಂಘಟನೆಗಳು ಮತ್ತಿತರ ಸಂಘ ಸಂಸ್ಥೆಗಳು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಜೀವನ ಮಟ್ಟಗಳ ಮೇಲೆ ನಡೆಯುವ ಪ್ರತಿಯೊಂದು ಧಾಳಿಗಳನ್ನು ಎದುರಿಸಿ ಹೋರಾಡುತ್ತಿವೆ.

ಸರಕಾರ ಜ್ಯಾರಿಗೊಳಿಸಲುದ್ದೇಶಿಸುವ ಎಲ್ಲ ಪ್ರತಿಗಾಮೀ ಕ್ರಮಗಳನ್ನು ವಿರೋಧಿಸಿ ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷದ ನಡುವೆ ನಡೆಯುತ್ತಿರುವ ಘರ್ಷಣೆಗಳನ್ನು ಪಾರ್ಲಿಮೆಂಟ್ ಕಾಣತೊಡಗಿದೆ. ಇದು ಬೆಳೆಯುತ್ತಿರುವ ಪ್ರಜಾಪ್ರಭುತ್ವವಾದೀ ಪ್ರಜ್ಞೆಯು ಸೂಚಿಸಲಾಗಿದೆಯೆಂಬುದನ್ನು ಬಂಡವಾಳಶಾಹೀ ವಿರೋಧ ಪಕ್ಷಗಳಿಂದ ಕೂಡ ನಿರಾಕರಿಸಲಾಗುತ್ತಿಲ್ಲ. ಬಿಹಾರ ಸರ್ಕಾರ ತೆಗೆದುಕೊಂಡಿರುವ ಪತ್ರಿಕಾ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳಬಹುದಾದ ಮಸೂದೆಯಂಥವು ದೇಶದಲ್ಲಿ ಬೆಳೆಯತೊಡಗಿದರೆ ಮತ್ತೊಂದು ತುರ್ತು ಪರಿಸ್ಥಿತಿ ಘೋಷಣೆಯಾಗಬಹುದೆಂಬ ಭೀತಿ ಇವರಿಗಿದೆ. ಇವೆಲ್ಲವೂ ಅಧಿಕಾರಶಾಹಿಯ ವಿರುದ್ಧದ ಹೋರಾಟವನ್ನು ಮತ್ತಷ್ಟು ಬಲಪಡಿಸುತ್ತವೆ.

ಬೆಳೆಯುತ್ತಿರುವ ಎಡ ಶಕ್ತಿಗಳ ಐಕ್ಯತೆ

ಸರ್ಕಾರದ ಸರ್ವಾಧಿಕಾರೀ ಕ್ರಮಗಳಾದ ಕಾರ್ಮಿಕ ಹಕ್ಕುಗಳ, ಪ್ರಜಾಸತ್ತಾತ್ಮಕ ಹಕ್ಕುಗಳ ದಮನಕ್ಕೆದುರಾಗಿ ನಡೆಯುತ್ತಿರುವ ಹೋರಾಟಗಳ ಮುಂಚೂಣಿಯಲ್ಲಿ ಎಡಶಕ್ತಿಗಳಿವೆ. ಇದರ ಫಲವಾಗಿ ಬಂಡವಾಳಶಾಹಿ—ಭೂಮಾಲೀಕ ಸರ್ಕಾರಕ್ಕೆ ಎದುರಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವೊಂದು ಬೆಳೆಯತೊಡಗಿರುವುದು ಸ್ಪಷ್ಟವಾಗುತ್ತಿದೆ. ಪಕ್ಷದ ವಿಜಯವಾಡ ಸಮ್ಮೇಳನದಲ್ಲಿ ಅಂಗೀಕರಿಸಿದ ಧೋರಣೆಯನ್ನು ಪಕ್ಷದ ಎಲ್ಲಾ ಘಟಕಗಳೂ ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತಂದಿರುವುದನ್ನು ಮತ್ತು ಇದು ಕ್ರಮೇಣ ಸರಿಯಾದ ದಿಕ್ಕಿನಲ್ಲಿ ನಿಧಾನವಾಗಿಯಾದರೂ ಪರಿಣಾಮ ಉಂಟು ಮಾಡುತ್ತಿರುವುದು ಕೇಂದ್ರ ಸಮಿತಿಗೆ ಸಮಾಧಾನ ತಂದಿದೆ.

ಸರ್ಕಾರದ ಪ್ರಜಾಪ್ರಭುತ್ವ ವಿರೋಧೀ ಸರ್ವಾಧಿಕಾರಿ ಧೋರಣೆಗಳ ವಿರುದ್ಧ ಹೋರಾಟವನ್ನು ಬಲಪಡಿಸುವುದು, ಸಾಮೂಹಿಕ ಹೋರಾಟಗಳನ್ನು ಮುಂದಕ್ಕೊಯ್ಯುವುದು, ಪ್ರತ್ಯೇಕತಾವಾದಿ, ಛಿದ್ರಕಾರೀ ಶಕ್ತಿಗಳನ್ನು ಸೋಲಿಸುವುದು, ಹರಿಜನರನ್ನು, ಕೃಷಿ ಕಾರ್ಮಿಕರನ್ನು ರಕ್ಷಿಸುವುದು, ಮಹಿಳಾ ಚಳುವಳಿಗಳಿಗೆ ನೆರವು ನೀಡುವುದು, ಕ್ಷಾಮ ಪರಿಸ್ಥಿತಿಯನ್ನು ಎದುರಿಸುವುದು, ಇವು ಜನತೆಯ ಸಮಸ್ಯೆಗೆ ಇರುವ ಪರಿಹಾರಗಳಾಗಿರುವುದರಿಂದ ಇವುಗಳನ್ನು ಮುಂದಕ್ಕೆ ಕೊಂಡೊಯ್ಯಲು ಕೇಂದ್ರ ಸಮಿತಿಯು ಕೆಲವು ತಕ್ಷಣದ ಕಾರ್ಯಕ್ರಮಗಳನ್ನು ರೂಪಿಸಿದೆ.

●

ರಾಜಕೀಯ ಸಮ್ಮೇಳನ

(3ನೇ ಪುಟದಿಂದ)

ಒದಗಿಸುವುದು, ನಿವೇಶನಗಳಿಲ್ಲದವರಿಗೆ ನಿವೇಶನ ಒದಗಿಸುವುದು.

5) ಬ್ಯಾಂಕ್‌ಗಳವರು ರೈತರುಗಳಿಗೆ ಸಾಲ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಕಿರಿಯ ಕಾಲೇಜಿನ ವಿದ್ಯಾರ್ಥಿಯಾದ ಪ್ರಸನ್ನಕುಮಾರ್‌ರವರ ವಂದನಾರ್ಪಣೆಯೊಂದಿಗೆ ಸಮ್ಮೇಳನವು ಮುಕ್ತಾಯವಾಯಿತು.

೬ನೇ ಯೋಜನೆ ಜಾರುವ ದಾರಿಯಲ್ಲಿ

(4ನೇ ಪುಟದಿಂದ)

ಗುವುದು. ಆಗ ಇನ್ನೂ ಹೆಚ್ಚಿನ ಬಿಗಿ ಶರತ್ತುಗಳಿಗೆ ಮಣಿಯಬೇಕಾಗುವುದು. ಉದಾರ ಆಮದು ನೀತಿಯಿಂದಾಗಿ ಆಂತರಿಕ ಕೈಗಾರಿಕಾ ಉತ್ಪಾದನೆಗಳಿಗೆ ಮಾರುಕಟ್ಟೆ ಕುಸಿಯಿತು. ಜಾಗತಿಕ ಆರ್ಥಿಕ ದುಃಸ್ಥಿತಿಯಿಂದಾಗಿ ಭಾರತದಂತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ರಫ್ತು ವ್ಯಾಪಾರ ಹೆಚ್ಚಲು ಅವಕಾಶಗಳಿಲ್ಲ. ಆಂತರಿಕ ಮಾರುಕಟ್ಟೆ, ಉದ್ಯೋಗ, ಬಂಡವಾಳ ಹೂಡುವಿಕೆ, ಕೃಷಿ ಕೈಗಾರಿಕೆಗಳ ಅಧಿಕ ಉತ್ಪಾದನೆ, ಸ್ವಾವಲಂಬನೆ ಹೆಚ್ಚಿಸಲು ಅಂತರರಾಷ್ಟ್ರೀಯ ಸಾಲಗಾರರು ಬಿಡುವುದಿಲ್ಲ.

ಇಂದಿರಾ ಸರಕಾರ ದೇಶದ ಅರ್ಥ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಶರತ್ತುಗಳಿಗೆ ಗುರಿಪಡಿಸಿ ಭಾರೀ ಅನಾಹುತ ಆಘಾತ ತಂದು ಹಾಕಿದೆ.

●

ಬಂಟ್ವಾಳ :

ಪೋಲಿಸರ ಕಿರುಕುಳ

ಅಬ್ಕಾರಿ ಪೋಲೀಸರು ಕಳ್ಳಭಟ್ಟಿ ಹುಡುಕುವ ನೆಪದಲ್ಲಿ ಬೀಡಿ ಮಜೂರರ ಮನೆಗೆ ನುಗ್ಗಿ ಕಿರುಕುಳ ಕೊಡುತ್ತಿರುವುದಾಗಿ ತಿಳಿದು ಬಂದಿದೆ.

11-9-82 ರಂದು ಕಸ್ಬಾ ಗ್ರಾಮದ ಮಂಡಾಡಿಯ ಬೀಡಿ ಕಾರ್ಮಿಕರ ಮನೆಗೆ ನುಗ್ಗಿ ಹೆಂಗಸರಿಗೆ ಅವಾಚ್ಯ ಶಬ್ದಗಳಿಂದ ಬೈದು ಭೀತಿ ವಾತಾವರಣ ನಿರ್ಮಿಸಿದ್ದಾರೆ.

ಸಿ. ಪಿ. ಐ. (ಎಂ) ಬಂಟ್ವಾಳ ತಾಲ್ಲೂಕು ಸಮಿತಿಯು ಅಬ್ಕಾರಿ ಪೋಲೀಸರ ವರ್ತನೆಯನ್ನು ಖಂಡಿಸಿದೆ.

○

ಮಂಡಾಡಿಯಲ್ಲಿ ಬೀಡಿ ಮಜೂರರ ಸಭೆ

ಮಂಡಾಡಿ ಪ್ರದೇಶದ ಬೀಡಿ ಮಜೂರರ ಸಭೆಯು 12-9-82 ರಂದು ನಡೆಯಿತು. ಶ್ರೀಮತಿ ಪರಮೇಶ್ವರಿ ಅವರು ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಕಾಂ| ಗೋಪಾಲ ಗೌಡರು ಸಭೆಯ ಉದ್ದೇಶವನ್ನು ತಿಳಿಸಿ ಸ್ವಾಗತಿಸಿದರು. ಕಾಂ| ವಾಸು ಗಟ್ಟಿಯವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ ಬೀಡಿ ಕಾರ್ಮಿಕರ ಸಮಸ್ಯೆಗಳ ಕುರಿತು ವಿವರಿಸಿದರು.

ಕೊನೆಯಲ್ಲಿ ಶ್ರೀಮತಿ ಗಿರಿಜ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಸಾವಿತ್ರಿ, ಕಾರ್ಯದರ್ಶಿಯಾಗಿ ಗಂಗಮ್ಮ ಮತ್ತು ಜೊತೆಕಾರ್ಯದರ್ಶಿಯಾಗಿ ಕಾಂ| ಶೀನ ಇವರುಳ್ಳ ಒಂದು ಸಮಿತಿಯನ್ನು ರಚಿಸಲಾಯಿತು.

ತುಮಕೂರು :

ಪರಿಹಾರ ಕಾರ್ಯಕ್ಕೆ ಒತ್ತಾಯ

ಈ ವರ್ಷ ಮುಂಗಾರಿನಿಂದ ಜಿಲ್ಲೆಯಾದ್ಯಂತ ಮಳೆಬಾರದೆಇರುವುದರಿಂದ ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಸಿ ಪಿ.ಐ. (ಎಂ) ಜಿಲ್ಲಾ ಸಮಿತಿ ಒತ್ತಾಯಿಸಿದೆ. ದಿನಾಂಕ 12-9-82 ರಂದು ಕಾಂ| ಮಹಮ್ಮದ್ ದಸ್ತಗೀರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯ ಸಭೆ ಸೇರಿತ್ತು.

ಕಂದಾಯ ಮತ್ತು ಬ್ಯಾಂಕುಗಳ ಸಾಲ ವಸೂಲಾತಿಯನ್ನು ನಿಲ್ಲಿಸಿ ಮತ್ತು ಮನ್ನಾ ಮಾಡಿ, ಜಾನುವಾರುಗಳಿಗೆ ನೀರು, ಹುಲ್ಲು ಒದಗಿಸುವುದು, ಅಗ್ಗದ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸಬೇಕೆಂದೂ ಸಭೆ ಸರಕಾರವನ್ನು ಒತ್ತಾಯಿಸಿದೆ.

ನಗರಸಭೆಯ ದುರಾಡಳಿತ :

ತುಮಕೂರು ನಗರಸಭೆಗೆ ಸುಮಾರು ವರ್ಷಗಳಿಂದ ಚುನಾವಣೆ ನಡೆಸದೆ ಪ್ರಾಥಮಿಕ ಹಂತದಲ್ಲೆ ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಿದೆ. ನಗರಸಭೆಯ ದುರಾಡಳಿತ ವಿಪರೀತಕ್ಕೆ ಹೋಗಿ ಲಕ್ಷಾಂತರ ರೂಪಾಯಿಗಳು ದುರ್ವ್ಯಯವಾಗುತ್ತಿರುವುದನ್ನು ತೀವ್ರವಾಗಿ ಖಂಡಿಸಿರುವ ಸಭೆಯು ಇದರ ವಿರುದ್ಧ ಎಲ್ಲ ವಿರೋಧ ಪಕ್ಷಗಳೊಡನೆ ಸಂಘಟಿತ ಹೋರಾಟ ನಡೆಸಲು ತೀರ್ಮಾನವಾಯಿತು.

ಮಹಿಳಾ ಉದ್ಯೋಗ ದಿನಾಚರಣೆ

ಕುಂದಾಪುರ : ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕುಂದಾಪುರ ಘಟಕದ ಆಶ್ರಯದಲ್ಲಿ ಸೆ. 5 ರಂದು 'ಮಹಿಳಾ ಉದ್ಯೋಗ ದಿನಾಚರಣೆ'ಯನ್ನು ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಸುಶೀಲಾ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ರಾಜ್ಯ ಘಟಕದ ಅಧ್ಯಕ್ಷೆ ಕಾಂ| ದೇವಕಿ ವಾರಿಯರ್ ಆಗಮಿಸಿದ್ದರು. ಕಾಂ| ದೇವಕಿ ಮಾತನಾಡುತ್ತಾ ಆರ್ಥಿಕ, ಸಾಮಾಜಿಕ ಅಸಮಾನತೆಗಳ ವಿರುದ್ಧ ಸಂಘಟಿತ ಹೋರಾಟ ನಡೆಸಲು ಕರೆ ಕೊಟ್ಟರು.

ಕುಮಾರಿ ಶ್ರೀಮತಿ ಕೋಡಿ ಇವರು 'ಸ್ತ್ರೀ ಮತ್ತು ಉದ್ಯೋಗ' ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಿದರು. ಆರಂಭದಲ್ಲಿ ಕಾರ್ಯದರ್ಶಿ ರವಿಕಲಾ ಸ್ವಾಗತಿಸಿದರು.

●

ಸರಕಾರಕ್ಕೆ ನಿಯೋಗ

13-9-82 ರಂದು ಗುಬ್ಬಿ (ತುಮಕೂರು ಜಿಲ್ಲೆ) ತಾಲ್ಲೂಕು ಬೋರ್ಡ್ ಅಧ್ಯಕ್ಷ ಶ್ರೀ ಸ್ವಾಮಿನಾಥ ಮೂರ್ತಿ, ಸದಸ್ಯರಾದ ಬಾಷುಸಾಬ್, ಸಿದ್ಧಗಂಗಮ್ಮ ಮತ್ತು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ| ಎಚ್. ಸಿ. ಚೆನ್ನಪ್ಪ ಇವರನ್ನೊಳಗೊಂಡ ನಿಯೋಗವೊಂದು ಬೆಂಗಳೂರಿನಲ್ಲಿ ರೆವಿನ್ಯೂ, ನಾಗರೀಕ ಸರಬರಾಜು ಮತ್ತು ಸಹಕಾರ ಮಂತ್ರಿಗಳನ್ನು ಭೇಟಿ ಮಾಡಿತು.

ತೀವ್ರ ಬರಗಾಲದಿಂದಾಗಿ ವಿಕೋಪಕ್ಕೆ ಹೋಗಿರುವ ಜಿಲ್ಲೆಯ ಪರಿಸ್ಥಿತಿಯನ್ನು ಮಂತ್ರಿಗಳಿಗೆ ವಿವರಿಸಿದ ನಿಯೋಗವು, ತಕ್ಷಣ ಪರಿಹಾರ ಕಾರ್ಯಗಳನ್ನು ಏರ್ಪಡಿಸಬೇಕೆಂದೂ, ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ನಿಯೋಗವು ಒತ್ತಾಯಿಸಿದೆ.

●

ವಿಜಯವಾಡಾ ಅಧಿವೇಶನದ ನಂತರದ ಬೆಳವಣಿಗೆಗಳನ್ನು ಕುರಿತು ಕೇಂದ್ರ ಸಮಿತಿಯ ವರದಿ

ವಿಜಯವಾಡದಲ್ಲಿ ನಡೆದ ನಮ್ಮ ಪಕ್ಷದ ಹನ್ನೊಂದನೇ ಕಾಂಗ್ರೆಸ್‌ನ ನಂತರದ ಈ ಏಳು ತಿಂಗಳಲ್ಲಿ ಜಾಗತಿಕ ಬಂಡವಾಳಶಾಹಿಯ ಮುಗ್ಗಟ್ಟು ಇನ್ನಷ್ಟು ತೀವ್ರಗೊಂಡಿದೆ. ನಮ್ಮ ಕಾಂಗ್ರೆಸ್‌ನಲ್ಲಿ ಅಂಗೀಕರಿಸಲಾಗಿದ್ದ ರಾಜಕೀಯ ನಿರ್ಣಯದಲ್ಲಿ ವಿವರಿಸಿರುವಂತಹ ಎಲ್ಲ ವೈರುಧ್ಯಗಳೂ ಮತ್ತಷ್ಟು ಹರಿತವಾಗಿವೆ.

ಈ ಜಾಗತಿಕ ಹಿನ್ನೆಲೆಯಲ್ಲಿ ಭಾರತದ ಆಳುವ ವರ್ಗಗಳು ಅನುಸರಿಸುತ್ತಿರುವ ಆರ್ಥಿಕ ಮತ್ತು ರಾಜಕೀಯ ಧೋರಣೆಗಳಿಂದಾಗಿ ಇಲ್ಲಿನ ಬಂಡವಾಳಶಾಹಿ ವ್ಯವಸ್ಥೆಯ ಮುಗ್ಗಟ್ಟು ಇನ್ನಷ್ಟು ಗಂಭೀರವಾಗುತ್ತಿದೆ. ಒಂದೆಡೆ ಸರ್ವಾಧಿಕಾರಿ ಶಕ್ತಿಗಳು ಬೆಳೆಯುತ್ತಿರುವಂತೆಯೇ ಇನ್ನೊಂದೆಡೆ ಈ ಸರ್ವಾಧಿಕಾರಕ್ಕೆ ವಿರುದ್ಧವಾದ ಪ್ರತಿಭಟನೆಯೂ ಸಾಮೂಹಿಕವಾಗಿ ಬೆಳೆದು ಬರುತ್ತಿದೆ. ಬೂರ್ಶ್ವಾ-ಭೂಮಾಲಿಕ ರಾಜಕೀಯ ಪಕ್ಷಗಳ ಕಾರ್ಯಕ್ರಮಗಳಿಗೆ ವಿರುದ್ಧವಾದ ಪ್ರತ್ಯೇಕ ಕಾರ್ಯಕ್ರಮವೊಂದರ ಆಧಾರದ ಮೇಲೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಕ್ರೋಢೀಕರಣವಾಗುತ್ತಿದೆ. ಇವೆಲ್ಲವೂ ದಿನೇ ದಿನೇ ತೀವ್ರವಾಗುತ್ತಿರುವ ಆರ್ಥಿಕ ಮುಗ್ಗಟ್ಟು ಮತ್ತು ರಾಜಕೀಯ ಹಾಗೂ ಆಡಳಿತ ಯಂತ್ರಗಳು ವಸ್ತುಶಃ ಕುಸಿದು ಬೀಳುತ್ತಿರುವುದರ ಹಿನ್ನೆಲೆಯಲ್ಲಿ ನಡೆಯುತ್ತಿವೆಯೆನ್ನುವುದನ್ನು ಗಮನಿಸಬೇಕು. ಈ ಎಲ್ಲ ವಿದ್ಯಮಾನಗಳು ಸಿ.ಪಿ.ಐ. (ಎಂ) ಗೆ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಮತ್ತು ಬೆಳೆಯುವಂತೆ ಮಾಡಲು ವಿಪುಲ ಅವಕಾಶಗಳನ್ನೊದಗಿಸಿವೆ ಮಾತ್ರವಲ್ಲ ಹಾಗೆ ಬೆಳೆಯುವುದನ್ನು ತೀರಾ ಅಗತ್ಯವಾಗಿಯೂ ಮಾಡಿವೆ. ನಮ್ಮ ಪಕ್ಷವು ತನ್ನ ಸಂಘಟನೆಯನ್ನು ಬಲಪಡಿಸಿಕೊಂಡು, ಒಂದುಗೂಡಿಸಬಹುದಾದ ಎಲ್ಲ ಶಕ್ತಿಗಳ ಐಕ್ಯವನ್ನು ಕಾರ್ಯಕ್ರಮಗಳ ನೆಲೆಯಲ್ಲಿ ಸಾಧಿಸಿ ಆ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಬೆಳೆದು ಬರುವಂತೆ ಮಾಡಬೇಕು.

ಅಣುಯುದ್ಧದ ಅಪಾಯ:

ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿರುವ ನಮ್ಮ ರಾಜಕೀಯ ನಿರ್ಣಯವು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪ್ರಪಂಚದ ಮೇಲೆ ಹೇರಲು ಪ್ರಯತ್ನಿಸುತ್ತಿರುವ ಅಣುಯುದ್ಧದ ಅಪಾಯದ ಕುರಿತು ಎಚ್ಚರಿಕೆ ನೀಡಿತ್ತು. ಈ ಯುದ್ಧವು ಇತಿಹಾಸದಲ್ಲಿ ನಡೆದ ಎಲ್ಲ ಯುದ್ಧಗಳಿಗಿಂತಲೂ ಹೆಚ್ಚು ಭಯಾನಕವಾಗಲಿದೆ. ಇತ್ತೀಚಿನ ದಿನಗಳಲ್ಲಿ ಈ ಯುದ್ಧದ ಭೀತಿ ಇನ್ನಷ್ಟು ಹೆಚ್ಚಿದೆ.

ಪಶ್ಚಿಮ ಯುರೋಪನ್ನು ಮೂರನೇ ಮಹಾ ಯುದ್ಧದ ರಣರಂಗವನ್ನಾಗಿ ಪರಿವರ್ತಿಸುವ ತನ್ನ ಇರಾದೆಯನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಬಹಿರಂಗವಾಗಿ ತೋರಿಸಿಕೊಡುತ್ತಿದೆ. ಈ ಯುದ್ಧದಲ್ಲಿ ಅಮೇರಿಕವು ಸೋವಿಯತ್ ಒಕ್ಕೂಟದ ವಿರುದ್ಧ ಅಣು ಅಸ್ತ್ರಗಳನ್ನು ಬಳಸಲಿದೆ. ಸೋವಿಯತ್ ಒಕ್ಕೂಟದ ವಿರುದ್ಧ ದೀರ್ಘಕಾಲೀನ ಅಣುಯುದ್ಧಕ್ಕೆ ತಾವು ಸನ್ನದ್ಧರಾಗುತ್ತಿದ್ದೇವೆಂದೂ ಇಂತಹ ಯುದ್ಧ ಐದು ವರ್ಷಗಳ ಕಾಲ ನಡೆದೀತೆಂದೂ ಅಮೇರಿಕನ್ ಸಾಮ್ರಾಜ್ಯಶಾಹಿಯ ವಕ್ತಾರರು ಬಹಿರಂಗ ಹೇಳಿಕೆಯಿತ್ತಿದ್ದಾರೆ. ನ್ಯಾಟೋ ರಾಷ್ಟ್ರಗಳು ಇಷ್ಟು ಮುಂದು ವರಿದಿಲ್ಲವಾದರೂ ಅವು ಹೆಚ್ಚು ಕಡಿಮೆ ಅಮೇರಿಕಾದ ಹೆಜ್ಜೆಯನ್ನೇ ಅನುಸರಿಸಲಿವೆ. ಮಾನವ ಇತಿಹಾಸದಲ್ಲೇ ಅತ್ಯಂತ ಭೀಕರವಾದ ವಿನಾಶಕಾರಿ ಯುದ್ಧವನ್ನು ತಮ್ಮ ನೆಲದಲ್ಲಿ ನಡೆಯಲು ಅವು ಅವಕಾಶ ಮಾಡಿಕೊಡುತ್ತಿವೆ.

ಮುಂದೊದಗಬಹುದಾದ ಈ ಅನಾಹುತವನ್ನು ತಡೆಗಟ್ಟಲು ಸೋವಿಯತ್ ಮುಂದಾಳುಗಳು ಈ ಅವಧಿಯಲ್ಲಿ ಹಲ ಉಪಕ್ರಮಗಳನ್ನು ಕೈಗೊಂಡಿದ್ದಾರೆ. ಸೋವಿಯತ್ ಒಕ್ಕೂಟವು ಇತರರಿಗಿಂತ ಮೊದಲು ತಾನಾಗಿ ಅಣು ಅಸ್ತ್ರಗಳನ್ನು ಬಳಸುವುದಿಲ್ಲವೆಂದು ಈಗಾಗಲೇ ಘೋಷಿಸಿದೆ. ಎಲ್ಲ ಅಣುಶಕ್ತಿ ರಾಷ್ಟ್ರಗಳೂ ಇಂತಹ ಘೋಷಣೆ ನೀಡಬೇಕೆಂದು ಅದು ಇನ್ನಿತರ ರಾಷ್ಟ್ರಗಳನ್ನು ಕಳಕಳಿಯಿಂದ ವಿನಂತಿಸಿಕೊಂಡಿದೆ. ಸೋವಿಯತ್ ರಷ್ಯದ ಈ ಉಪಕ್ರಮವನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಇದಕ್ಕೆ ಮೊದಲು ಸೋವಿಯತ್ ಒಕ್ಕೂಟವು ತನ್ನ ಪಶ್ಚಿಮ ಪ್ರದೇಶದಲ್ಲಿ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ಇನ್ನು ಮುಂದೆ ಸ್ಥಾಪಿಸುವುದಿಲ್ಲವೆಂದೂ ಇದಕ್ಕೆ ಪ್ರತಿಯಾಗಿ ಪಶ್ಚಿಮ ಯುರೋಪ್‌ನಲ್ಲಿ ಅಮೇರಿಕಾವು ಪರ್ಶಿಂಗ್ II ಕ್ಷಿಪಣಿಗಳನ್ನು ನೆಲೆಗೊಳಿಸುವುದಿಲ್ಲವೆಂಬ ಆಶಯವನ್ನು ತಾನು ಹೊಂದಿರುವುದಾಗಿಯೂ ಸಾರಿತ್ತು. ಆದರೆ ರಷ್ಯಾದ ಈ ಕೊಡುಗೆಯನ್ನು ಅಮೇರಿಕಾ ತಿರಸ್ಕರಿಸಿದೆ; ಜಾಗತಿಕ ಅಣುಯುದ್ಧವನ್ನು ನಡೆಸಿಯೇ ಬಿಡುವೆನೆಂಬ ಹಟ ಅಮೇರಿಕದ ವರ್ತನೆಯಿಂದ ಸ್ಪಷ್ಟವಾಗುತ್ತಿದೆ;

ಸೋವಿಯತ್ ಒಕ್ಕೂಟದ ಈ ಕೊಡುಗೆಯಿಂದ ವ್ಯಕ್ತವಾಗುವ ಇನ್ನೂ ಒಂದು ಅಂಶವಿದೆ. ಒಂದೆಡೆ ಅಮೇರಿಕಾದ ಮುಂದಾಳುತ್ವದಲ್ಲಿರುವ ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿನ ಆಕ್ರಮಣಕಾರಿ ಆಳುವ ವರ್ಗಗಳು ಮತ್ತು ಇನ್ನೊಂದೆಡೆ ಸೋವಿಯತ್ ಒಕ್ಕೂಟ ಮೊದಲಾದ ಶಾಂತಿಪ್ರಿಯ, ಸಮಾಜವಾದಿ ರಾಷ್ಟ್ರಗಳ ಸರಕಾರಗಳು ಹಾಗೂ ಜನತೆ ಇವೆರಡರ ನಡುವಿನ ಸ್ಪಷ್ಟ ವ್ಯತ್ಯಾಸವನ್ನು ಇಲ್ಲಿ ಕಾಣಬಹುದು. ಯುದ್ಧ ಮತ್ತು ವಿಶ್ವಶಾಂತಿಗೆ ಸಂಬಂಧಿಸಿದಂತೆ ಈ ಎರಡೂ ಬಣಗಳು ತೋರಿಸುತ್ತಿರುವ ವರ್ತನೆಯಲ್ಲಿನ ವ್ಯತ್ಯಾಸವು ವಾಸ್ತವವಾಗಿ ಮುಗ್ಗಟ್ಟಿನಿಂದ ತುಂಬಿರುವ ಬಂಡವಾಳಶಾಹಿ ವ್ಯವಸ್ಥೆ ಮತ್ತು ಅಂತಹ ಮುಗ್ಗಟ್ಟಿನಿಂದ ಮುಕ್ತವಾದ ಸಮಾಜವಾದಿ ವ್ಯವಸ್ಥೆ ಇವೆರಡರ ನಡುವಿನ ಅಪಾರ ವ್ಯತ್ಯಾಸವನ್ನೇ ಪ್ರತಿಬಿಂಬಿಸುತ್ತಿದೆ

ಇಂದು ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಆರ್ಥಿಕ ಮುಗ್ಗಟ್ಟಿನಲ್ಲಿ ಹೊಸದೊಂದು ಹಂತವನ್ನು ಹಾದು ಹೋಗುತ್ತಿವೆ. ನಿರುದ್ಯೋಗಿಗಳ ಸಂಖ್ಯೆ ಅಧಿಕವಾಗುತ್ತಿರುವುದು, ಏರುತ್ತಿರುವ ಜೀವನ ವೆಚ್ಚ, ಆಯವ್ಯಯ ಮತ್ತು ವಿದೇಶೀ ವ್ಯಾಪಾರದಲ್ಲಿ ಕಾಣಿಸಿಕೊಳ್ಳುತ್ತಿರುವ ಕೊರತೆ ಇವೆಲ್ಲ ದಿನೇ ದಿನೇ ತೀವ್ರವಾಗುತಿದ್ದು ಬಂಡವಾಳಶಾಹಿ ರಾಷ್ಟ್ರಗಳಿಗೆ ಗಂಭೀರವಾದ ಸಾಮಾಜಿಕ ಸಮಸ್ಯೆಗಳನ್ನು ತಂದೊಡ್ಡುತ್ತಿವೆ. ಹೀಗೆ ತೀವ್ರವಾಗುತ್ತಿರುವ ಮುಗ್ಗಟ್ಟಿನ ಹೊರೆ ತಮ್ಮ ಮೇಲೆ ಬೀಳುತ್ತಿರುವುದನ್ನು ವಿರೋಧಿಸಿ ಅಲ್ಲಿನ ಕಾರ್ಮಿಕ ವರ್ಗವು ಬೃಹತ್ ಹೋರಾಟಗಳನ್ನು ಸಂಘಟಿಸುತ್ತಿದೆ. ಮುಂದುವರಿದ ರಾಷ್ಟ್ರಗಳೆಂದು ಕರೆದುಕೊಳ್ಳಲ್ಪಡುವ ಎಲ್ಲ ರಾಷ್ಟ್ರಗಳೂ ಮುಗ್ಗಟ್ಟಿನ ನೋವನ್ನು ಅನುಭವಿಸುತ್ತಿದ್ದಾವೆಂದು ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್.ನ ವರದಿಗಳನ್ನೂ ಸೇರಿದಂತೆ 1982ನೇ ಸಾಲಿನ ಎಲ್ಲ ಅಧಿಕೃತ ವರದಿಗಳೂ ತೋರಿಸಿಕೊಟ್ಟಿವೆ.

ಈ ಮುಗ್ಗಟ್ಟು ಸೃಷ್ಟಿಸಿರುವ ಸಮಸ್ಯೆಗಳಿಂದ ಪಾರಾಗಲು ಬಂಡವಾಳಶಾಹಿ ಜಗತ್ತಿನ ಮುಂದಾಳುಗಳು ಯೋಜಿಸುತ್ತಿರುವ ಮಾರ್ಗಗಳಾದರೂ ಯಾವುವು ? ಮಾರಕ ಆಯುಧಗಳ ತಯಾರಿಕೆಗಾಗಿ ಅಪಾರ ಮೊತ್ತದ ಹಣವನ್ನು ವಿನಿಯೋಗಿಸಿ ಆ ಮೂಲಕ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ತಮ್ಮಲ್ಲಿ ಸಂಗ್ರಹಿಸಿಕೊಳ್ಳುವುದು ಮತ್ತು ತೃತೀಯ ಜಗತ್ತಿನ ಪ್ರತಿಗಾಮಿ ಆಡಳಿತೆಗಳಿಗೆ ಇವುಗಳನ್ನು ಮಾರಾಟ ಮಾಡುವುದೇ ಈ ಉಪಾಯಗಳಲ್ಲಿ ಮುಖ್ಯವಾದದ್ದು. ಹಾಗಾಗಿ ದಿನೇ ದಿನೇ ಸಂಕುಚಿತಗೊಳ್ಳುತ್ತಿರುವ ಮಾರುಕಟ್ಟೆಯಲ್ಲಿ ವ್ಯಾಪಾರ ನಡೆಸುವಾಗ ಎದುರಿಸಬೇಕಾದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಂಡವಾಳಶಾಹಿ ರಾಷ್ಟ್ರಗಳ ಆಳುವ ವರ್ಗಗಳ ಕೈಯ್ಯಲ್ಲಿರುವ ಮುಖ್ಯ ಉಪಾಯವೆಂದರೆ ಶಸ್ತ್ರಾಸ್ತ್ರಗಳ ನಿರ್ಮಾಣವೊಂದೇ.

ಸಮಾಜವಾದಿ ರಾಷ್ಟ್ರಗಳ ಪಾಲಿಗಂತೂ ರಕ್ಷಣೆಗಾಗಿ ಸಿದ್ಧತೆಮಾಡಿಕೊಳ್ಳುವುದು ಅನಿವಾರ್ಯವಾಗಿಬಿಟ್ಟಿದೆ. ಯಾಕೆಂದರೆ ಇಂತಹ ಸಿದ್ಧತೆ ಇಲ್ಲದಿದ್ದಲ್ಲಿ ಅವುಗಳಿಗೆ ಸಾಮ್ರಾಜ್ಯಶಾಹಿಗಳಿಂದ ಎಂದಾದರೂ ಅಪಾಯ ತಪ್ಪಿದ್ದಲ್ಲ. ಹಾಗಾಗಿ ಸಮಾಜವಾದಿ ರಚನಾತ್ಮಕ ವೆಚ್ಚಗಳಿಗಾಗಿ ವಿನಿಯೋಗಿಸಬಹುದಾಗಿದ್ದ ಅಮೂಲ್ಯವಾದ ಸಂಪನ್ಮೂಲಗಳಲ್ಲಿ ಒಂದು ಭಾಗವನ್ನು ಅವುಗಳು ರಕ್ಷಣಾ ವೆಚ್ಚಕ್ಕಾಗಿ ವಿನಿಯೋಗಿಸಲೇಬೇಕಾಗಿದೆ. ನಮ್ಮ ಹನ್ನೊಂದನೇ ಕಾಂಗ್ರೆಸ್‌ನ ರಾಜಕೀಯ ನಿರ್ಣಯವು ಹೇಳಿರುವಂತೆ, ಇತ್ತೀಚೆಗೆ ಸಮಾಜವಾದಿ ರಾಜ್ಯಗಳಲ್ಲಿ ಉತ್ಪಾದನೆಯು ಹೆಚ್ಚಳದ ಪ್ರಮಾಣದಲ್ಲಿ ನಿಧಾನಗತಿಯುಂಟಾಗಿರುವುದಕ್ಕೆ ಇದೊಂದು ಮುಖ್ಯ ಕಾರಣ

ಇಂತಹ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ಸಿದ್ಧಾಂತಗಳಿಂದ ಸಂಪೂರ್ಣ ಬಿಡುಗಡೆ ಹೊಂದಿರದ ಬಹುಸಂಖ್ಯಾತ ಸಾಮಾನ್ಯ ಜನರೂ ಯುದ್ಧ ಮತ್ತು ಶಾಂತಿಯ ಪ್ರಶ್ನೆಯಲ್ಲಿ ಸೋವಿಯತ್ ಒಕ್ಕೂಟ ಹಾಗೂ ಅದರ ಮಿತ್ರರು ವಹಿಸಿರುವ ನಿಲುವೆಯನ್ನು ಮೆಚ್ಚಿಕೊಂಡಿರುವುದರಲ್ಲಿ ಆಶ್ಚರ್ಯವಿಲ್ಲ. ಈ ದಿಸೆಯಲ್ಲಿ ಸೋವಿಯತ್ ಒಕ್ಕೂಟವು ಕೈಗೊಂಡಿರುವ ಹಲವಾರು ಹೆಜ್ಜೆಗಳು ಸೈದ್ಧಾಂತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳನ್ನೂ ಮೀರಿ ವಿಶ್ವಾದ್ಯಂತ ಜನರಿಂದ ಮೆಚ್ಚುಗೆಯ ಪ್ರತಿಕ್ರಿಯೆಗಳಿಸುತ್ತಿವೆ.

ಜಗತ್ತಿನ ಎಲ್ಲೆಡೆ ಅದರಲ್ಲೂ ಮುಖ್ಯವಾಗಿ ಯುರೋಪ್ ಮತ್ತು ಜಪಾನಿನಲ್ಲಿ ಪ್ರಬಲವಾದ ವಿಶ್ವ ಶಾಂತಿ ಚಳುವಳಿ ಬೆಳೆದು ಬರುತ್ತಿದೆ. ಗುತ್ತೇದಾರಿ ಬಂಡವಾಳಗಾರರು ಆಧಿಪತ್ಯ ನಡೆಸುತ್ತಿರುವ ರಾಷ್ಟ್ರಗಳನ್ನೂ ಒಳಗೊಂಡು ಎಲ್ಲ ರಾಷ್ಟ್ರಗಳಲ್ಲೂ ಅಣುಯುದ್ಧದ ವಿರುದ್ಧ ಮತ್ತು ವಿಶ್ವಶಾಂತಿಗಾಗಿ ಬೃಹತ್ ಪ್ರದರ್ಶನಗಳೂ, ರ್‍ಯಾಲಿಗಳೂ ನಡೆಯುತ್ತಿವೆ: ಲಂಡನ್, ಪ್ಯಾರಿಸ್, ಬ್ರುಸೆಲ್ಸ್, ರೋಮ್, ಬಾನ್ ಮತ್ತು ಹೆಲ್ಸಿಂಕಿಗಳಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡ ಪ್ರದರ್ಶನಗಳು ನಡೆದಿವೆ. ರೀಗನ್ ಅವರ ಪ. ಯುರೋಪ್ ಯಾತ್ರೆಯ ಕಾಲದಲ್ಲಂತೂ ಈ ಪ್ರದರ್ಶನಗಳು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ನಡೆದಿವೆ. '1982ರ ಶಾಂತಿಯಾತ್ರೆ' ಯುರೋಪಿನಲ್ಲಿ ಈವರೆಗೆ ನಡೆದ ಎಲ್ಲಾ ರ್‍ಯಾಲಿಗಳಿಗಿಂತಲೂ ಬೃಹತ್ ಪ್ರಮಾಣದ್ದಾಗಿತ್ತು. ನ್ಯಾಟೋ ಒಕ್ಕೂಟದಲ್ಲಿ ಉನ್ನತ ಸ್ಥಾನದಲ್ಲಿದ್ದು ಇದೀಗ ನಿವೃತ್ತರಾಗಿರುವ ಅನೇಕ ಗಣ್ಯವ್ಯಕ್ತಿಗಳು ಅಮೇರಿಕಾದ ಅಣು ಯುದ್ಧ ತಯಾರಿಯನ್ನು ಖಂಡಿಸಿ ಹೇಳಿಕೆಯಿತ್ತಿದ್ದಾರೆ. ಈ ಪ್ರತಿಭಟನೆಗಳಲ್ಲಿ ಕಾರ್ಮಿಕರು, ರೈತರು, ಬುದ್ಧಿ ಜೀವಿಗಳು, ಸಣ್ಣ ವ್ಯಾಪಾರಿಗಳು, ಗಂಡಸರು, ಹೆಂಗಸರು ಮತ್ತು ಮಕ್ಕಳೆನ್ನದೆ ಎಲ್ಲರೂ ಪಾಲುಗೊಳ್ಳುತ್ತಿದ್ದಾರೆ.

ಅಮೇರಿಕಾದ ಸಂಯುಕ್ತ ಸಂಸ್ಥಾನದಲ್ಲೂ ಯುದ್ಧದ ವಿರುದ್ಧ ಸಾರ್ವಜನಿಕ ಅಭಿಪ್ರಾಯಕ್ರೋಢೀಕರಣಗೊಳ್ಳುತ್ತಿದೆ. ಸೈನ್ಯದಲ್ಲೂ, ಆಡಳಿತೆಯಲ್ಲೂ ಪ್ರಮುಖ ಹುದ್ದೆಗಳನ್ನು ಹೊಂದಿದ್ದವರನ್ನೂ ಸೇರಿದಂತೆ ಬದುಕಿನ ವಿವಿಧ ಕ್ಷೇತ್ರದಲ್ಲಿನ ಗಣ್ಯ ವ್ಯಕ್ತಿಗಳು ಅಮೇರಿಕಾದ ಯುದ್ಧ ತಯಾರಿಯನ್ನು ಬಹಿರಂಗವಾಗಿಯೇ ವಿರೋಧಿಸುತ್ತಿದ್ದಾರೆ. ಇತ್ತೀಚಿಗೆ ನ್ಯೂಯಾರ್ಕ್‌ನಲ್ಲಿ ನಡೆದ ಅಣುಶಸ್ತ್ರ ನಿಶ್ಶಸ್ತ್ರೀಕರಣ ಯಾತ್ರೆಯಲ್ಲಿ ಮಿಲಿಯಾಂತರ ಜನ ಭಾಗವಹಿಸಿದ್ದರು. 'ಅಣು ನಿಶ್ಶಸ್ತ್ರೀಕರಣ' ಮತ್ತು 'ಶಾಂತಿಯ ಮೂಲಕ ಉದ್ಯೋಗ' ಎಂಬೆರಡು ಚಳುವಳಿಗಳ ಪ್ರಯತ್ನದಿಂದಾಗಿ ಈ ಯಾತ್ರೆ ಸಂಘಟಿಸಲ್ಪಟ್ಟಿತ್ತು. ದೇಶದ ಮೂಲೆ ಮೂಲೆಗಳಲ್ಲೂ ವ್ಯಾಪಿಸಿದ್ದ ಈ ಚಳುವಳಿಯ ಫಲಸ್ವರೂಪವಾಗಿ ಅಮೇರಿಕಾದ ಹೆಚ್ಚಿನ ಸ್ಥಳೀಯ ಸಂಸ್ಥೆಗಳು ಶಸ್ತ್ರಾಸ್ತ್ರದ ಮೇಲಿನ ವೆಚ್ಚವನ್ನು ಕಡಿತಗೊಳಿಸಬೇಕೆಂಬ ನಿರ್ಣಯಗಳನ್ನು ಅಂಗೀಕರಿಸಿದ್ದವು. ಯುದ್ಧದ ವಿರುದ್ಧ ಸಂಘಟಿಸಲಾದ ಈ ಪ್ರಬಲ ಸಾರ್ವಜನಿಕ ಅಭಿಪ್ರಾಯದಿಂದಾಗಿ ರೀಗನ್ ಸರಕಾರದ ಮೇಲೆ ಒತ್ತಡಗಳು ಹೇರಲ್ಪಟ್ಟು ಅದು ಸಾರ್ವಜನಿಕ ಅಭಿಪ್ರಾಯವನ್ನು ತೃಪ್ತಿಗೊಳಿಸಲು ಬಗೆ ಬಗೆಯ ಉಪಾಯಗಳನ್ನು ಕೈಗೊಳ್ಳಬೇಕಾಯಿತು. ಆದರದ ರೀಗನ್ ಆಡಳಿತೆ ದೀರ್ಘಕಾಲೀನ ಅಣು ಯುದ್ಧದ ತಯಾರಿಯನ್ನು ಕೈಬಿಟ್ಟಿಲ್ಲ.

ಅಣುಬಾಂಬಿನ ವಿನಾಶಕಾರಿ ಅನಾಹುತವನ್ನು ಎದುರಿಸಿದವರು ಜಪಾನಿಯರು ಮಾತ್ರ. ಕಳೆದ ಆಗಸ್ಟ್‌ನಲ್ಲಿ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬು ಹಾಕಲ್ಪಟ್ಟ ದಿನವನ್ನು ಜಪಾನಿನಲ್ಲಿ ವಿಶಿಷ್ಟ ರೀತಿಯಿಂದ ಆಚರಿಸಲಾಯಿತು. ಈ ನಗರಗಳಲ್ಲಿ ನಡೆದ ಬೃಹತ್ ಪ್ರದರ್ಶನಗಳಲ್ಲಿ "ಹಿರೋಶಿಮಾ ಇನ್ನು ಬೇಡ" "ನಾಗಸಾಕಿ ಇನ್ನು ಬೇಡ" ಎಂಬ ಘೋಷಣೆಗಳೂ ಜಪಾನ್-ಅಮೇರಿಕಾ ರಕ್ಷಣಾ ಒಪ್ಪಂದವನ್ನು ವಿರೋಧಿಸುವ ಘೋಷಣೆಗಳೂ ಮೊಳಗಿದವು.

ವಿಶ್ವದ ಶಾಂತಿ ಚಳುವಳಿ ಮತ್ತು ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್‌ನಂತಹ ದುಡಿಯುವ ಜನರ ಸಮರಶೀಲ ಸಂಘಟನೆಗಳು ಈ ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಿ ಅದನ್ನು ಯುದ್ಧದ ವಿರುದ್ಧ ಮತ್ತು ವಿಶ್ವಶಾಂತಿಗಾಗಿ ವಿಶ್ವವ್ಯಾಪಿಯಾದ ಚಳುವಳಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿವೆ. ನಮ್ಮ ದೇಶದಲ್ಲೂ ಕಾರ್ಮಿಕ ವರ್ಗ ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ ನೀಡಿದ ಕರೆಯಂತೆ ಸೆಪ್ಟೆಂಬರ್ 1 ರಂದು ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತಾ ದಿನವನ್ನು ಆಚರಿಸಿದೆ. ಆರು ರಾಜಕೀಯ ಪಕ್ಷಗಳು ನೀಡಿದ ಕರೆಯ ಮೇರೆಗೆ ಅಕ್ಟೋಬರ್ ನಾಲ್ಕರಂದು ನವದೆಹಲಿಯಲ್ಲಿ ನಡೆಯಲಿರುವ 'ಶಾಂತಿ ಯಾತ್ರೆ'ಯನ್ನು ಯಶಸ್ವಿಗೊಳಿಸಲು ಸಕಲ ಪ್ರಯತ್ನಗಳೂ ನಡೆಯುತ್ತಿವೆ.

(ಮುಂದುವರೆಯುವುದು)

ಸಹಸ್ರಾರು ಪ್ಯಾಲಿಸ್ಟೈನಿಯರ ಕಗ್ಗೊಲೆ

(1ನೇ ಪುಟದಿಂದ)

ಖಂಡನೆಯ ಬಿರುಗಾಳಿ ಎದ್ದಿದೆ. ಇಸ್ರೇಲ್ ಪ್ರಧಾನಿ ಬೇಗಿನ್‌ನ ಮನೆ ಎದರು ಸಹಸ್ರಾರು ಯಹೂದ್ಯ ಜನರು ಹತ್ಯಾಕಾಂಡವನ್ನು ಪ್ರತಿಭಟಿಸಿ, ಬೇಗಿನ್‌ನ ರಾಜೀನಾಮೆಗೆ ಒತ್ತಾಯಿಸಿ ಮತಪ್ರದರ್ಶನ ನಡೆಸಿದ್ದಾರೆ. ಈ ಮತಪ್ರದರ್ಶಕರನ್ನು ಚದುರಿಸಲು ಅಶ್ರುವಾಯು ಪ್ರಯೋಗಿಸಲಾಗಿದೆ. ಪ್ಯಾಲಿಸ್ಟೈನ್ ನಿರಾಶ್ರಿತರ ನರಮೇಧದ ಬಗ್ಗೆ ತನಿಖೆ ನಡೆಸಲು ಸರಕಾರ ನಿರಾಕರಿಸಿರುವುದನ್ನು ಪ್ರತಿಭಟಿಸಿ ಬೇಗಿನ್ ಸರಕಾರದ ಇಂಧನ ಸಚಿವ ಯಿಷಾಕ್ ಬರ್‍ಮನ್ ರಾಜೀನಾಮೆ ಸಲ್ಲಿಸಿದ್ದಾರೆ.

ಪ್ಯಾಲಿಸ್ಟೈನ್ ನಿರಾಶ್ರಿತ ಶಿಭಿರದ ಮೇಲೆ ದಾಳಿ ನಡೆಸಿ ಸಹಸ್ರಾರು ಪ್ಯಾಲಿಸ್ಟೈನ್‌ರನ್ನು ಕಗ್ಗೊಲೆ ನಡೆಸಿರುವುದನ್ನು ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ತೀವ್ರವಾಗಿ ಖಂಡಿಸಿದೆ. ಇಸ್ರೇಲ್‌ನ 'ಗಾಡ್ ಫಾದರ್' ರೇಗನ್ ಸಹ ಈ ಹತ್ಯಾಕಾಂಡವನ್ನು ಖಂಡಿಸಿದ್ದಾರೆ.

ತೀರದ ಧಾಹ :

ಮುಂದಿನ ಭಾನುವಾರದೊಳಗೆ ಪಶ್ಚಿಮ ಬೇರೂತ್‌ನಿಂದ ಇಸ್ರೇಲ್ ಪಡೆ ಸಂಪೂರ್ಣ ವಾಪಸ್ ಆಗಲಿದೆ ಎಂದು ಇಸ್ರೇಲ್ ರೇಡಿಯೋ ಪ್ರಕಟಿಸಿರುವುದನ್ನು ಸಮರ್ಥಿಸಲು ಇಸ್ರೇಲ್ ಸೈನ್ಯದ ವಕ್ತಾರರು ನಿರಾಕರಿಸಿದ್ದಾರೆ. ಇದು ಝಿಯೋನ್‌ವಾದಿಗಳ ರಕ್ತ ಪಿಪಾಸೆಗೆ ಸ್ಪಷ್ಟ ನಿದರ್ಶನ. ಸಾಮ್ರಾಜ್ಯಶಾಹಿ ಅಮೇರಿಕದ ಬೆಂಬಲದಿಂದ ಲೆಬನಾಸ್ ಮೇಲೆ ದಾಳಿ ನಡೆಸಿ ಪ್ಯಾಲಿಸ್ಟೈನ್ ಯೋಧರ ಕಲ್ಗೊಲೆ ನಡೆಸಿ, ಅಳಿದುಳಿದವರನ್ನು ಲೆಬನಾನ್ ಬಿಟ್ಟು ಹೋಗುವಂತೆ ಒತ್ತಡ ತಂದಿದ್ದನ್ನು ಇಲ್ಲಿ ನೆನೆಯಬಹುದು. ಸ್ವತಂತ್ರ ಪ್ಯಾಲಿಸ್ಟೈನ್ ರಾಷ್ಟ್ರದ ರಚನೆಗೆ ಕಂಕಣ ಬದ್ಧರಾಗಿರುವ ಪಿ ಎಲ್.ಓ. ಯೋಧರನ್ನು ಸಂಪೂರ್ಣ ನಿರ್ನಾಮ ಮಾಡುವುದೇ ಇಸ್ರೇಲ್‌ನ ಗುರಿಯಾಗಿದೆ.

ಪಿ. ಎಲ್. ಓ. ಯೋಧರಿಗೆ ಜಯ ಖಂಡಿತ :

ಪಿ. ಎಲ್. ಓ. ಹೋರಾಟ ವಿಯೆಟ್ನಾಂ ಹೋರಾಟದ ನಂತರ ಅತ್ಯಂತ ಉಜ್ವಲ ಹೋರಾಟ ಇದು. ಸ್ವಾತಂತ್ರ್ಯ ಪ್ರೇಮಿ ಜನತೆಯ ಅಪಾರ ತ್ಯಾಗದ ಪ್ರತೀಕ ಈ ಹೋರಾಟ.

ಪ್ಯಾಲಿಸ್ಟೈನ್‌ರನ್ನು ಹತ್ತಿಕ್ಕಲು, ನಿರ್ನಾಮಮಾಡಲು ಇಸ್ರೇಲ್ ನಡೆಸಿರುವ ಹತ್ಯಾಕಾಂಡ ಬರ್ಬರವಾದುದು. ನಿರಪರಾಧಿ, ಅಸಹಾಯಕ ನಿರಾಶ್ರಿತರ ಮೇಲೆ ಇಸ್ರೇಲ್ ಬೆಂಬಲದೊಂದಿಗೆ ಕ್ರಿಶ್ಚಿಯನ್ ಮತಾಂಧ ಸಂಘಟನೆಗಳಾದ ಫಲಾಂಗಿಸ್ಟ್ ಪಾರ್ಟಿ, ಹದ್ದದ್ ಗುಂಪು ನಡೆಸಿರುವ ಘೋರ ಆಕ್ರಮಣವನ್ನು ಮಾನವ ಜನಾಂಗ ಖಂಡಿತ ಕ್ಷಮಿಸದು. ಅತ್ಯಾಚಾರಿಗಳಿಗೆ ಘೋರ ಶಿಕ್ಷೆ ಕಾದಿದೆ.

ಬೇಗಿನ್, ಷರಾನ್‌ರ ಪತನ ಖಂಡಿತ. ಇಸ್ರೇಲ್ ಜನತೆ ಈ ನರ ರಾಕ್ಷಸರನ್ನು ಕೆಳಗಿಳಿಸುವಲ್ಲಿ, ಮಾನವತೆಗೆ ಕಳಂಕ ತಂದಿರುವ ಬೇಗಿನ್‌ನನ್ನು ಒದ್ದೋಡಿಸುವಲ್ಲಿ ಮುಂದಾಗುವರೆಂದು ನಾವು ಈ ಸಂದರ್ಭದಲ್ಲಿ ಆಶಿಸುತ್ತೇವೆ.

ಪ್ರತ್ಯೇಕ ರಾಷ್ಟ್ರ ಹೊಂದುವ ಪ್ಯಾಲಿಸ್ಟೈನ್‌ರ ಹಕ್ಕನ್ನು ಇಸ್ರೇಲ್ ಜನತೆ ಮಾನ್ಯ ಮಾಡಬೇಕು.

ಪ್ಯಾಲಿಸ್ಟೈನ್‌ರ ಧಿರೋದಾತ್ತ ಹೋರಾಟಕ್ಕೆ ಜಯ ಶತಃಸಿದ್ಧ.

ಇಸ್ರೇಲ್ ಬೆಂಬಲದಿಂದ ಕ್ರಿಶ್ಚಿಯನ್ ಮತಾಂಧರು ನಡೆಸಿದ ಘೋರ ನರಮೇಧಕ್ಕೆ ಧಿಕ್ಕಾರ!

ಮಾನವತೆಯ ದ್ರೋಹಿ ಬೇಗಿನ್, ಷರಾನ್‌ರಿಗೆ ಧಿಕ್ಕಾರ !

ಝಿಯೋನ್‌ವಾದಿಗಳನ್ನು ಬೆಂಬಲಿಸುತ್ತಿರುವ ಸಾಮ್ರಾಜ್ಯಶಾಹಿ ಅಮೇರಿಕಕ್ಕೆ ಧಿಕ್ಕಾರ!

ಪ್ಯಾಲಿಸ್ಟೈನ್ ನಿರಾಶ್ರಿತರ ಕಗ್ಗೊಲೆಯನ್ನು ಖಂಡಿಸಿ ಪಿ.ಎಲ್.ಓ. ವಿಮೋಚನಾ ಹೋರಾಟವನ್ನು ಬೆಂಬಲಿಸಿ.

ಭದ್ರಾವತಿ : ವಿ.ಐ.ಎಸ್.ಎಲ್. ಆಡಳಿತ ವರ್ಗಕ್ಕೆ ಮುಖಭಂಗ ಕಾರ್ಮಿಕರ ಯಶಸ್ವೀ ಸಭೆ

10-9-82 ರಂದು ಇಲ್ಲಿ ವಿ. ಐ. ಎಸ್. ಎಲ್. ಉಕ್ಕು ಕಾರ್ಮಿಕರ ಒಕ್ಕೂಟದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಧ್ವನಿ ವರ್ಧಕ ಉಪಯೋಗಿಸಲು ಮೊದಲು ಪೋಲಿಸ್ ಇಲಾಖೆ ಅನುಮತಿ ನೀಡಿತ್ತು. ಆಡಳಿತ ವರ್ಗದ ಪಿತೂರಿಯಿಂದ ಈ ಅನುಮತಿಯನ್ನು ವಾಪಸ್ ಪಡೆಯಲಾಗಿತ್ತು. ಆದರೂ ಸಹ ಸಭೆ ನಡೆಯುವುದನ್ನು ನಿಲ್ಲಿಸಲಾಗಲಿಲ್ಲ. ಅಷ್ಟೇ ಅಲ್ಲ, ಸಭೆ ಯಶಸ್ವಿಯಾಗಿ ನಡೆಯಿತು.

ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಕಾಂ। ಸೂರ್ಯನಾರಾಯಣರಾವ್ ಮಾತನಾಡಿ ಪೋಲಿಸರ ವರ್ತನೆಯನ್ನು ಖಂಡಿಸಿದರು. ಎನ್. ಸಿ. ಸಿ. ನೇತೃತ್ವದಲ್ಲಿ ಅಕ್ಟೋಬರ್ 12 ಮತ್ತು 13 ರಂದು ಹೈದರಾಬಾದ್‌ನಲ್ಲಿ ನಡೆಯಲಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಮ್ಮೇಳನಕ್ಕೆ ಇಲ್ಲಿಂದಲೂ ಪ್ರತಿನಿಧಿಗಳನ್ನು ಕಳಿಸಬೇಕೆಂದು ತಿಳಿಸಿದರು.

ಆರಂಭದಲ್ಲಿ ಕಾಂ। ಪುಟ್ಟಸ್ವಾಮಿ ಸ್ವಾಗತಿಸಿದರು. ಸಭೆಗೆ ಮುನ್ನ ಸುಮಾರು 4000 ಕಾರ್ಮಿಕರು ಮೆರವಣಿಗೆ ಹೊರಡಿಸಿದ್ದರು.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀಮತಿ ರಾಜಮ್ಮನವರನ್ನು ಮತ್ತು ಒಕ್ಕೂಟದ ಇತರ ಅಭ್ಯರ್ಥಿಗಳನ್ನು ಚುನಾಯಿಸಿದ್ದಕ್ಕಾಗಿ ಕಾರ್ಮಿಕರನ್ನು ಸಿ.ಐ.ಟಿ.ಯು. ಶಿವಮೊಗ್ಗಾ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ। ಚಂದ್ರೂಕುಟ್ಟಿ ಅಭಿನಂದಿಸಿದ್ದಾರೆ.

○

ವಿರೋಧ ಪಕ್ಷಗಳು ಒಂದಾಗಲಿ

ಕರ್ನಾಟಕ ಕ್ರಾಂತಿರಂಗದಲ್ಲಿ ಒಡಕಾಗಿ ಜೆ. ಎಚ್. ಪಟೇಲರು ಒಂದು ಗುಂಪಿಗೂ ಬಂಗಾರಪ್ಪನವರು ಇನ್ನೊಂದು ಗುಂಪಿಗೂ ಅಧ್ಯಕ್ಷರುಗಳಾಗಿ ಆರಿಸಲ್ಪಟ್ಟಿದ್ದಾರೆ. ಇದು ಆ ಪಕ್ಷದ ಆಂತರಿಕ ಪ್ರಶ್ನೆಯಾದರೂ ಇಂದಿರಾ ಕಾಂಗ್ರೆಸ್ಸನ್ನೆದುರಿಸುತ್ತಿರುವ ಜನತೆಗೆ, ಮುಂಬರುವ ರಾಜ್ಯದ ಶಾಸನ ಸಭಾ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಿ ಕರ್ನಾಟಕದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಬೇಕೆಂದು ಹಂಬಲಿಸುತ್ತಿದ್ದ ಜನತೆಗೆ ಇದೊಂದು ನಿರಾಶಾದಾಯಕ ಘಟನೆಯಾಗಿದೆಯೆಂದು ಹೇಳಲು ನಾವು ಇಚ್ಛೆಪಡುತ್ತೇವೆ. ದೇಶದಲ್ಲಿ ಇತರ ಬಂಡವಾಳಶಾಹಿ—ಭೂಮಾಲಿಕ ಪಕ್ಷಗಳು ಒಡೆದು ಹೋಗುತ್ತಿರುವಂತೆಯೇ ಇಲ್ಲಿಯ ಕ್ರಾಂತಿರಂಗವೂ ಒಡೆದಿದೆಯೆನ್ನಬಹುದು. ಕಾರ್ಯಕ್ರಮದಲ್ಲಿ ಭಿನ್ನಾಭಿಪ್ರಾಯವಲ್ಲ; ಯಾರು ನಾಯಕರಾಗಿರಬೇಕೆಂಬುದೇ ಈ ಒಡಕಿಗೆ ಕಾರಣವಾಗಿದೆ. ಇದನ್ನು ಯಾರೂ ಸಮರ್ಥಿಸಲಾರರು.

ಕಾಂಗ್ರೈನ ಭದ್ರಕೋಟೆಯಂತಿದ್ದ ಕರ್ನಾಟಕದಲ್ಲಿ ಜನ ಬೇಸತ್ತು ಕಳೆದ ರಡು ವರ್ಷಗಳಲ್ಲಿ ಚಾರಿತ್ರಿಕ ಹೋರಾಟಗಳನ್ನು ನಡೆಸಿ ಹೊಸ ದಾಖಲೆಯನ್ನು ಸ್ಥಾಪಿಸಿದೆ. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಚರಿತ್ರಾರ್ಹ ಹೋರಾಟ, ಬಹು ರಾಷ್ಟ್ರೀಯ ಸಂಸ್ಥೆಗಳಾದ ಮೈಕೊ, ಐ.ಟಿ.ಸಿ. ಕಾರ್ಖಾನೆಗಳ ಕಾರ್ಮಿಕರ ಹೋರಾಟಗಳು, ಹೋಟೆಲ್ ಮುಂತಾದ ಕಾರ್ಮಿಕರ ಹೋರಾಟಗಳು, ನರಗುಂದ, ನವಲಗುಂದ, ಕೋಲಾರ ಮತ್ತಿತರ ಪ್ರದೇಶಗಳ ರೈತರ ಚಾರಿತ್ರಿಕ ಹೋರಾಟಗಳು ದೇಶದ ಗಮನವನ್ನು ಸೆಳೆದಿರುವುದಲ್ಲದೆ ಸರ್ಕಾರದ ಪೈಶಾಚಿಕ ದಬ್ಬಾಳಿಕೆಗೂ ಗುರಿಯಾಗಿದೆ. ಎಲ್ಲಾ ವಿಭಾಗದ ಜನತೆಯ ಸಮಸ್ಯೆಗಳನ್ನು ಬಗೆಹರಿಸಲು ಸರಕಾರ ವಿಫಲಗೊಂಡಿದೆಯೆಂಬುದು ಈಗ ಸ್ಪಷ್ಟವಾಗಿದೆ. ಭ್ರಷ್ಟಾಚಾರ, ಲಂಚ ಖುಷ್ಮತ್ತುಗಳು ತಾಂಡವವಾಡುತ್ತಿರುವುದು ಎಲ್ಲರಿಗೂ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಬಂಗಾರಪ್ಪನವರೂ ಕಾಂಗ್ರೆಸ್ಸಿಗೆ ರಾಜಿನಾಮೆಯನ್ನು ಕೊಟ್ಟು ಹೊರಗೆ ಬಂದಿರುವುದನ್ನು ಜನ ಸ್ವಾಗತಿಸಿ ಎಲ್ಲ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳೂ, ಶಕ್ತಿಗಳೂ, ಒಟ್ಟು ಸೇರಿ ಕಾಂಗ್ರೆಯನ್ನು ಸೋಲಿಸಲು ಒಂದಾಗುವರೆಂದು ನಿರೀಕ್ಷಿಸುತ್ತಿರುವಾಗ ಕ್ರಾಂತಿರಂಗವು ಒಡೆದುದರಿಂದ ಜನತೆಯಲ್ಲಿ ನಿರಾಶೆ ಬಂದಿರುವುದು ಸ್ವಾಭಾವಿಕ.

ಆದರೂ ಈ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳೂ, ಶಕ್ತಿಗಳೂ ಒಟ್ಟಿಗೆ ಸೇರಿ ಚುನಾವಣೆಯಲ್ಲಿ ಪರಸ್ಪರ ಹೊಂದಾಣಿಕೆಗೆ ಪ್ರಯತ್ನಿಸುವುದು ಅಗತ್ಯ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಈ ಹೊಂದಾಣಿಕೆಗೆ ಸಂಪೂರ್ಣ ಬೆಂಬಲ ನೀಡುವುದು ಮತ್ತು ಇದಕ್ಕೆಲ್ಲರೂ ಪ್ರಯತ್ನಿಸಬೇಕೆಂದು ಹಾರೈಸುತ್ತದೆ.

ದೆಹಲಿಗೆ ಯುದ್ಧ ವಿರೋಧಿ ಶಾಂತಿ ಯಾತ್ರೆ

(1ನೇ ಪುಟದಿಂದ)

ಯುದ್ಧವಿರೋಧಿ ಶಾಂತಿ ಯಾತ್ರೆ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಭಾಗ ವಹಿಸುವಂತೆ ಎಲ್ಲ ಪಕ್ಷಗಳನ್ನೂ, ಸಾಮೂಹಿಕ ಸಂಘಟನೆಗಳನ್ನು ಆರು ಪಕ್ಷಗಳ ನಾಯಕರು ವಿನಂತಿಸಿದ್ದಾರೆ. ತನ್ಮೂಲಕ ಅಣುಯುದ್ಧದ ವಿರುದ್ಧವಾದ ಜಾಗತಿಕ ಹೋರಾಟವನ್ನ ಬಲಗೊಳಿಸಬೇಕೆಂದು ಅವರು ವಿಜ್ಞಾಪಿಸಿಕೊಂಡಿದ್ದಾರೆ.

ಘೋಷಣೆಗಳು

- ಅಣು ಅಸ್ತ್ರ ಪೈಪೋಟಿಯನ್ನು ಕೊನೆಗೊಳಿಸಿ.
- ಹಿಂದೂ ಮಹಾಸಾಗರವನ್ನು ಶಾಂತಿವಲಯವನ್ನಾಗಿ ಪರಿವರ್ತಿಸಿ.
- ಪಾಕೀಸ್ತಾನದ ಜೀಯಾ ಆಡಳಿತಕ್ಕೆ ಭಾರೀ ಪ್ರಮಾಣದಲ್ಲಿ ಮಾಡುತ್ತಿರುವ ಶಸ್ತ್ರ ಸಹಾಯವನ್ನು ನಿಲ್ಲಿಸಿ.
- ಲೆಬನಾನ್‌ನಲ್ಲಿ ಇಸ್ರೇಲ್ ಆಕ್ರಮಣ ಕೊನೆಗೊಳ್ಳಲಿ, ಲೆಬನಾನ್ ಜನರ, ಪ್ಯಾಲೆಸ್ಟೈನ್ ವಿಮೋಚನಾ ಹೋರಾಟಗಾರರ ಜನಾಂಗ ಹತ್ಯೆ ನಿಲ್ಲಿಸಿ.

○

ಗಮನಿಸಿ

ಅಕ್ಟೋಬರ್ 4 ರಂದು ದೆಹಲಿಯಲ್ಲಿ ನಡೆಯಲಿರುವ 'ಯುದ್ಧ ವಿರೋಧಿ ಶಾಂತಿ ಯಾತ್ರೆ'ಗೆ ಪೂರಕವಾಗಿ ಐಕ್ಯರಂಗ ಅಕ್ಟೋಬರ್ 3ರ ಸಂಚಿಕೆ ವಿಶೇಷ ಸಂಚಿಕೆಯಾಗಿ ಹೊರ ಬರಲಿದೆ.

ನಾಲ್ಕು ಹೆಚ್ಚು ಪುಟಗಳನ್ನೊಳಗೊಳ್ಳುವ (12 ಪುಟಗಳು) ಈ ಸಂಚಿಕೆಯ ಬೆಲೆ 1 ರೂ. ಮುದ್ರಣ ವೆಚ್ಚ, ನ್ಯೂಸ್ ಪ್ರಿಂಟ್ ಕಾಗದದ ಬೆಲೆ ಅಧಿಕವಾಗಿರುವುದರಿಂದ ಒಂದು ರೂ. ಬೆಲೆ ನಿಗದಿ ಮಾಡಿದೆ. ಓದುಗರು, ಏಜನ್ಸಿದಾರರು ಸಹಕರಿಸಬೇಕಾಗಿ ಕೋರಿಕೆ.

—ಸಂಪಾದಕ

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.